CC-O. In Public Domain. Digitized by eGangotri

ಕರ್ನಾಟಕದಲ್ಲಿ ಸಹಕಾರ ಯೋಜನೆ



ಆರ್. ಎಸ್. ವೆಂಕಟರಾಮಯ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಪ್ರಕಟನೆಗಳಲ್ಲಿ
ಕರ್ನಾಟಕದ ಇತಿಹಾಸ ಸಂಸ್ಕೃತಿಗಳಷ್ಟೇ ಅಲ್ಲ
ಭಾರತದ ಇತಿಹಾಸ ಸಂಸ್ಕೃತಿಯೂ ಕೂಡ

ಇದು ನಮ್ಮ ಭಾರತ

ಮಾಲೆಯು ಹೆಸರೇ ಸೂಚಿಸುವಂತೆ
ಭಾರತದ ಭೂವಿವರಣೆ ಇತಿಹಾಸ ಸಂಸ್ಕೃತಿಗಳ
ವರ್ಣರಂಜಿತ ಚಿತ್ರ ನಿರೂಪಣೆ

ಮಾರಾಟಕ್ಕೆ ಸಿದ್ಧವಾಗಿರುವವು

ಅಚ್ಚಿನಲ್ಲಿ

ಇದು ನಮ್ಮ ಭಾರತ 1
ಇದು ನಮ್ಮ ಭಾರತ 2
ಇದು ನಮ್ಮ ಭಾರತ 3
ಇದು ನಮ್ಮ ಭಾರತ 4
ಇದು ನಮ್ಮ ಭಾರತ 5

ಬೆಲೆ ರೂ. 5

ಅಧಿಕೃತ ಮಾರಾಟಗಾರರು
ಇಂಡಿಯ ಬುಕ್ ಹೌಸ್ ಗಾಂಧಿನಗರ ಬೆಂಗಳೂರು–560 009

ಐ ಬಿ ಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು–560 009

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ–342

ಕರ್ನಾಟಕದಲ್ಲಿ
ಸಹಕಾರ ಯೋಜನೆ

ಆರ್. ಎಸ್. ವೆಂಕಟರಾಮಯ್ಯ
ಸಹಕಾರ ಸಂಘಗಳ ಸಂಯುಕ್ತ ರಿಜಿಸ್ಟ್ರಾರರು, ಕರ್ನಾಟಕ ಸರ್ಕಾರ

ಐ ಬಿ ಎಚ್ ಪ್ರಕಾಶನ
ಗಾಂಧಿನಗರ. ಬೆಂಗಳೂರು–560 009

Sri Vidyabharathi Book Centre, Sringeri

CC-O. In Public Domain. Digitized by eGangotri

KARNATAKADALLI SAHAKARA YOJANE— a monograph on the Co-operative movement in Karnataka written in Kannada by R.S. Venkataramaiah. Published by P.N. Kamat, IBH Prakashana, Fifth Main Road, Gandhinagar, Bangalore-560 009

Copyright © 1977 by the Publisher

*

ಬೆಲೆ : ರೂ. 1.50

*

© ಸರ್ವಸ್ವಾಮ್ಯ ಪ್ರಕಾಶಕರದು

*

ಮುಖಪುಟ : ಮೋಹನ
ಛಾಯಾಚಿತ್ರಗಳು : 'ಸಹಕಾರ' ವಾರಪತ್ರಿಕೆ

*

ಪ್ರಕಾಶಕರು : ಪಿ. ಎನ್. ಕಾಮತ್, ಐಬಿಎಚ್ ಪ್ರಕಾಶನ, ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು — 560 009. ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು — 560 054

*

ಅಧಿಕೃತ ಮಾರಾಟಗಾರರು :
ಇಂಡಿಯ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು – 560 009

*

Paper used for printing this book was made available by the Government of India at concessional rate.

Sri Vidyabharathi Book Centre, Srirangam

CC-O. In Public Domain. Digitized by eGangotri

ಕರ್ನಾಟಕದಲ್ಲಿ ಸಹಕಾರ ಯೋಜನೆ

ಭಾರತ ದೇಶ ಹೆಚ್ಚಾಗಿ ರೈತರು ಕಾರ್ಮಿಕರು ಕೂಲಿಗಾರರು ಮೊದಲಾದ ವರಿಂದ ಕೂಡಿದೆ. ಇದರಿಂದಾಗಿ ನಮ್ಮ ದೇಶ ಇತರ ಪ್ರಗತಿಪರ ದೇಶ ಗಳಾದ ಅಮೇರಿಕಾ ರಷ್ಯ ಜಪಾನ್ ಮೊದಲಾದವುಗಳಿಗಿಂತ ಆರ್ಥಿಕವಾಗಿ ಹಿಂದುಳಿದಿದೆ, ಅನೇಕ ಕುಟುಂಬಗಳಿಗೆ ಹೊಟ್ಟೆತುಂಬ ಆಹಾರ, ಮೈತುಂಬ ಬಟ್ಟೆ ಮತ್ತು ವಾಸಿಸಲು ವಸತಿ ಕೂಡ ಇರುವುದಿಲ್ಲ. ಇವರಲ್ಲಿ ಅನೇಕರು ಸಾಲಗಾರರಾಗಿ ಶ್ರೀಮಂತರ ಶೋಷಣೆಗೆ ಒಳಗಾಗಿದ್ದಾರೆ. ಇದಷ್ಟೇ ಅಲ್ಲದೆ ಮಧ್ಯವರ್ತಿ ವರ್ತಕರು ದುರಾಶಾ ಮನೋಭಾವದಿಂದ ಪದಾರ್ಥಗಳ ಬೆಲೆ ಏರಿಸಿ ಬಡ ಜನರ ಹೆಚ್ಚಿನ ದುಸ್ಥಿತಿಗೆ ಕಾರಣರಾಗಿದ್ದಾರೆ. ಇಂಥ ಸಂದರ್ಭ ಗಳನ್ನು ಎದುರಿಸಬೇಕಾದರೆ ಜನರು ತಮ್ಮದೇ ಆದ ಸಹಕಾರ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು. ಈ ರೀತಿಯ ಸಂಘಟನೆಯಿಂದ ಜನರು ತಮ್ಮ ಅವಶ್ಯಕತೆಗಳನ್ನು ನ್ಯಾಯವಾದ ಬೆಲೆಯಲ್ಲಿ ಪೂರೈಸಿಕೊಳ್ಳುವುದಲ್ಲದೆ, ಗಳಿಸಿದ ಲಾಭಾಂಶವನ್ನು ತಮ್ಮದೇ ಆದ ಸಂಘದ ಏಳಿಗೆಗೆ ತೊಡಗಿಸಬಹುದು.

ಇಂಗ್ಲೆಂಡಿನಲ್ಲಿ ಸಹಕಾರ

ಇದೇ ತೆರನಾದ ಪರಿಸ್ಥಿತಿ ಇಂಗ್ಲೆಂಡಿನಲ್ಲಿ ಕ್ರಿ.ಶ. 1760ರಲ್ಲಿ ಇದ್ದಿತು. ಶ್ರೀಮಂತರು, ರೈತರನ್ನು ಕಾರ್ಮಿಕ ವರ್ಗದವರನ್ನು ತಮ್ಮ ಅನುಕೂಲ ಕ್ಕಾಗಿಯೇ ಶೋಷಿಸುತ್ತಿದ್ದರು. ಭಾರತ ದೇಶದಂತೆಯೇ ಇಂಗ್ಲೆಂಡ್ ಸಹ ವ್ಯವಸಾಯ ಪ್ರಧಾನವಾದ ದೇಶವೇ ಆಗಿತ್ತು. ಜಮೀನುಗಳ ಬಹು ಭಾಗ ಶ್ರೀಮಂತರ ಕೈಯಲ್ಲಿಯೇ ಇದ್ದಿತು. ಕೈಗಾರಿಕೆ ಕ್ಷೇತ್ರದಲ್ಲಿಯೂ ಬಡ ಜನರು ತೊಂದರೆಪಡುತ್ತಿದ್ದರು. ಅನೇಕ ಕಾರ್ಖಾನೆಗಳಲ್ಲಿ ಕಾರ್ಮಿಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಪ ಕೂಲಿಗಾಗಿ ದಿನಕ್ಕೆ 12ರಿಂದ 17 ಘಂಟೆಗಳವರೆಗೆ ದುಡಿಯಬೇಕಾಗಿತ್ತು. ಹೆಚ್ಚು ಲಾಭವನ್ನು ಪಡೆಯುವ ದುರುದ್ದೇಶದಿಂದ ಅನೇಕ ಕಾರ್ಖಾನೆಗಳ ಮಾಲೀಕರು ಅತಿ ಚಿಕ್ಕ ವಯಸ್ಸಿನ ಮಕ್ಕಳಿಂದಲೂ ದಿನಕ್ಕೆ 17 ಘಂಟೆಗಳವರೆಗೆ ದುಡಿಸಿಕೊಳ್ಳುತ್ತಿದ್ದರು. ಇದರ ಜೊತೆಗೆ ವ್ಯಾಪಾರಗಾರರು ಲಾಭ ಬಡುಕತನದಿಂದ ದಿನಬಳಕೆ ವಸ್ತುಗಳ ಬೆಲೆಯನ್ನು ಅಧಿಕಗೊಳಿಸಿ ಬಡ ಜನರನ್ನು ಬವಣೆಗೆ ಒಳಪಡಿಸುತ್ತಿದ್ದರು. ಅನೇಕ ಜನರಿಗೆ ಜೀವನ ನಡೆಸುವುದೇ ದುರ್ಲಭವಾಯಿತು. ಆಗಿನ ಸರ್ಕಾರ ಇವರಿಗೆ ಯಾವ ರೀತಿಯ ಪರಿಹಾರವನ್ನೂ ಕೊಡುವ ಮನಸ್ಸು ಮಾಡಲಿಲ್ಲ. ಈ ರೀತಿ ಜನರು ಪರಿಪರಿಯ ಕಷ್ಟಗಳಿಂದ ಕಂಗಾಲಾಗಿರುವಾಗ ಅವರಿಗೆ ಬದುಕಿನಲ್ಲಿ ಒಂದು ಚೇತನ ಮತ್ತು ಹೊಸ ಬೆಳಕನ್ನು ಮೂಡಿಸಿದ ಮಹಾನುಭಾವ ರಾಬರ್ಟ್ ಓವೆನ್.

ರಾಬರ್ಟ್ ಓವೆನ್ : ರಾಬರ್ಟ್ ಓವೆನ್ 1771ರಲ್ಲಿ ಒಂದು ಬಡ ಕುಟುಂಬದಲ್ಲಿ ಜನಿಸಿದ. ಈತ ತನ್ನ ಒಂಬತ್ತನೇ ವಯಸ್ಸಿನಲ್ಲಿ ಒಂದು ಹತ್ತಿ ಗಿರಣಿಯಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ. ತನ್ನ ಕೌಶಲ ಮತ್ತು ಕರ್ತವ್ಯ ನಿಷ್ಠೆಗಳಿಂದ ಉನ್ನತ ಸ್ಥಾನಕ್ಕೇರಿದ, ಕೆಲವು ವರ್ಷಗಳನಂತರ ಅವನು ಅದರ ಮಾಲೀಕನೂ ಆದ. ತನ್ನ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರ ಕಷ್ಟಗಳನ್ನು ಮನಗಂಡಿದ್ದ ಆತ ಅವರ ಕಷ್ಟ ನಿವಾರಣೆಗೆ ಕೆಲವು ಸುಧಾರಣೆಗಳನ್ನು ತಂದ. ಕಾರ್ಮಿಕರ ದಿನದ ಕೆಲಸದ ವೇಳೆಯನ್ನು 17 ಘಂಟೆಗಳಿಂದ 10 ಘಂಟೆಗಳಿಗೆ ಇಳಿಸಿದ. ಆದರೂ ಅವರ ದಿನಗೂಲಿಯನ್ನು ಕಡಿಮೆ ಮಾಡಲಿಲ್ಲ. ಚಿಕ್ಕಮಕ್ಕಳು ಕಾರ್ಖಾನೆಯಲ್ಲಿ ಪಡುತ್ತಿದ್ದ ಬವಣೆಯನ್ನು ಅರಿತ ಅವನು ಹತ್ತು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ಸೇರಿಸಲು ನಿಷೇಧಿಸಿದ. ತಪ್ಪುಮಾಡಿದವರ ಮೇಲೆ ವಿಧಿಸುತ್ತಿದ್ದ ದಂಡವನ್ನು ನಿಲ್ಲಿಸಿದ. ಕಾರ್ಮಿಕರ ಅನುಕೂಲಕ್ಕಾಗಿ ಆಸ್ಪತ್ರೆ, ಪುಕ್ಕಟೆಯಾಗಿ ವೈದ್ಯಕೀಯ ಸಲಹೆ, ಆಟದ ಮೈದಾನ, ಮನರಂಜನೆಗೆ ಅನುಕೂಲ ಮೊದಲಾದುವುಗಳನ್ನು ಒದಗಿಸಿದ.

ಈ ಸುಧಾರಣೆಗಳಿಂದ ಅವನ ಕಾರ್ಖಾನೆಯ ಕಾರ್ಮಿಕರಿಗೆ ತೃಪ್ತಿ ಉಂಟಾಯಿತು. ಕಾರ್ಖಾನೆಯ ಉತ್ಪತ್ತಿಯೂ ಆದಾಯವೂ ಹೆಚ್ಚಿತು. ತನ್ನ ಈ ಪ್ರಯೋಗದ ಯಶಸ್ಸನ್ನು ಕಂಡು ಇತರ ಕಾರ್ಖಾನೆಗಳ ಮಾಲೀಕರಿಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಬರ್ಟ್ ಓವೆನ್

(ಚಿತ್ರ: ಮನೋಹರ)

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಸರ್ಕಾರಕ್ಕೂ ಕಾರ್ಮಿಕರ ಕಷ್ಟಗಳನ್ನು ನಿವಾರಿಸಿ, ಅವರ ಜೀವನ ಸುಧಾರಿಸಲು ಮನವಿ ಮಾಡಿಕೊಂಡ. ಇವನ ಮನವಿ ಅವರಾರ ಮನ ಸ್ಸನ್ನೂ ತಾಗಲಿಲ್ಲ. ಇದರಿಂದ ಬೇಸತ್ತು ಪ್ರತಿ ಗ್ರಾಮದಲ್ಲೂ "ಸಹಕಾರಿ ಗ್ರಾಮ" ಎಂಬ ಯೋಜನೆಯನ್ನು ತರಲು ಪ್ರಯತ್ನಿಸಿದ. ಇದರಂತೆ ಆಯಾ ಗ್ರಾಮದ ಜನರೆಲ್ಲರೂ ಒಟ್ಟುಗೂಡಿ ಕೆಲಸಮಾಡಿ ಅದರಿಂದ ಬಂದ ಪ್ರತಿಫಲ ವನ್ನು ಪ್ರತಿಯೊಬ್ಬನೂ ಸಮನಾಗಿ ಹಂಚಿಕೊಳ್ಳುವ ಏರ್ಪಾಡುಮಾಡಿದ. ಈ ಕ್ರಮದಿಂದ ಮಧ್ಯವರ್ತಿಗಳಿಂದಲೂ ಕಾರ್ಖಾನೆ ಮಾಲೀಕರಿಂದಲೂ ಆಗುವ ಶೋಷಣೆಯನ್ನು ತಪ್ಪಿಸಬಹುದೆಂದು ಯೋಚಿಸಿದ. ಈ ಯೋಜನೆಯನ್ನು ಪ್ರತಿಯೊಂದು ಗ್ರಾಮದಲ್ಲೂ ಕಾರ್ಯರೂಪಕ್ಕೆ ತಂದಲ್ಲಿ ನೂತನ ಸಮಾಜ ವನ್ನೇ ನಿರ್ಮಿಸಬಹುದೆಂದು ಆಶಿಸಿದ. ರಾಬರ್ಟ್ ಓವೆನ್ 'ಸಹಕಾರಿ ತತ್ತ್ವ'ದ ಪ್ರತಿಪಾದನೆಯ ಮೂಲಪುರುಷನೆಂದರೆ ತಪ್ಪಾಗಲಾರದು. ಕಾಲಕ್ರ ಮದಲ್ಲಿ ಜನರ ಸ್ವಾರ್ಥ ನಿರಕ್ಷರತೆ ಅಸಾಮರ್ಥ್ಯತೆಗಳಿಂದ ಈತನ ಪ್ರಯತ್ನ ಸ್ಥಗಿತವಾಯಿತು. ಜನಸಾಮಾನ್ಯರ ಕಷ್ಟ ಮೊದಲಿನಂತೆಯೇ ಉಳಿಯಿತು. ದಿನದಿನಕ್ಕೆ ಪದಾರ್ಥಗಳ ಬೆಲೆ ಏರಿ ಜನರು ಹೆಚ್ಚು ಹೆಚ್ಚು ಕಷ್ಟಪಡು ವಂತಾಯಿತು. ಬರುತ್ತಿದ್ದ ಅಲ್ಪ ಆದಾಯದಲ್ಲಿ ಜೀವನ ನಡೆಸುವುದೇ ಕಷ್ಟವಾಯಿತು. ಅಂಥ ಪರಿಸ್ಥಿತಿಯಲ್ಲಿ ಓವೆನನ ತತ್ತ್ವಗಳಿಗೆ ಪುನಃ ಚಾಲನೆ ದೊರೆಯಿತು. ಕಾರ್ಮಿಕ ವರ್ಗದವರು ಸಹಕಾರ ತತ್ತ್ವಗಳನ್ನು ಮನಗಂಡು ಜಾಗೃತರಾದರು. ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳಲು ಸಹಕಾರಿ ತತ್ತ್ವದ ಮೇಲೆ ಸಂಘವನ್ನು ಸ್ಥಾಪಿಸಬೇಕೆಂದು ಕಾರ್ಮಿಕ ಜನರು ನಿರ್ಧರಿಸಿ ದರು. ಮೊದಲು ನಮಗೆ ಅವಶ್ಯವಾದ ನಿತ್ಯಬಳಕೆ ವಸ್ತುಗಳನ್ನು ಒಟ್ಟಾಗಿ ಕೊಂಡು ತಮ್ಮಲ್ಲೇ ಹಂಚಿಕೊಳ್ಳಲು ಯೋಚಿಸಿದರು. ಇದಕ್ಕೆ ಬೇಕಾದ ಬಂಡ ವಾಳವನ್ನು ತಮ್ಮ ಆದಾಯದಿಂದ ಕೊಡಲು ಮುಂದೆ ಬಂದರು.

ರಾಕ್‌ಡೇಲ್ ಮುಂದಾಳುಗಳು : ಈ ಯೋಜನೆಯನ್ನು ರೂಪಗೊಳಿ ಸಲು ಮೊದಲು ಪ್ರಯತ್ನಪಟ್ಟಿದ್ದು ರಾಕ್‌ಡೇಲ್ ಎಂಬ ಪಟ್ಟಣದಲ್ಲಿ. ಆ ಪಟ್ಟಣವು 25,000 ಜನಸಂಖ್ಯೆಯಿಂದ ಕೂಡಿದ ಉಣ್ಣೆ ಗಿರಣಿಯ ಕೇಂದ್ರ. ವಿವಿಧ ಕಸುಬುಗಳಲ್ಲಿ ನಿರತರಾಗಿದ್ದ 28 ಜನ ಮುಂದಾಳುಗಳು 1884ರಲ್ಲಿ ಕೇವಲ 28 ಪೌಂಡುಗಳ ಷೇರು ಬಂಡವಾಳದೊಂದಿಗೆ ಸಹಕಾರ ತತ್ತ್ವದ ಮೇಲೆ ಒಂದು ಸಂಘವನ್ನು ಸ್ಥಾಪಿಸಿದರು. ಸಂಘದಲ್ಲಿ ಪ್ರತಿಯೊಬ್ಬ ಸದಸ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಗೂ ಸಮನಾದ ಹಕ್ಕುಬಾಧ್ಯತೆಯಿತ್ತು. ಪ್ರತಿಯೊಬ್ಬ ಸದಸ್ಯನೂ ಆ ಸಂಘದ ಷೇರು ಬಂಡವಾಳಕ್ಕಾಗಿ ಒಂದು ಪೌಂಡನ್ನು ಕಂತಿನ ರೂಪದಲ್ಲಿ ನೀಡಲು ಅವಕಾಶವಿತ್ತು. ಪೂರ್ತಿ ಷೇರು ಬಂಡವಾಳ ವಸೂಲಾದ ನಂತರ ಸಂಘವು ಸದಸ್ಯರಿಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ಐದು ವಸ್ತುಗಳನ್ನು ಮಾತ್ರ ಕೊಂಡು ತಂದು ಮಾರುವ ವ್ಯವಸ್ಥೆ ಮಾಡಿತು. ಆಧುನಿಕ ಸಹಕಾರಿ ಆಂದೋಳನಕ್ಕೆ ಈ ಸಂಸ್ಥೆಯ ಸ್ಥಾಪನೆ ನಾಂದಿಯಾಯಿತು. ಈ ಸಂಸ್ಥೆಯ ಮುಖ್ಯ ಉದ್ದೇಶಗಳೇನೆಂದರೆ :

1. ಸದಸ್ಯರ ಅಲ್ಪ ಉಳಿತಾಯ ಶೇಖರಣೆಯಿಂದ ಸಂಘದ ಸದಸ್ಯರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದು.
2. ಸಂಘದ ಸದಸ್ಯರಿಗೆ ಸುಲಭ ಬೆಲೆಯಲ್ಲಿ ಗ್ರಾಹಕ ವಸ್ತುಗಳನ್ನು ಒದಗಿಸುವುದು.
3. ಸದಸ್ಯರ ಸಾಮಾಜಿಕ ಸ್ಥಿತಿಯನ್ನು ಉತ್ತಮಪಡಿಸಲು ಅವರ ವಾಸಕ್ಕಾಗಿ ಮನೆಗಳನ್ನು ಕೊಳ್ಳುವುದು ಮತ್ತು ಕಟ್ಟಿಕೊಡುವುದು.
4. ಸದಸ್ಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ಕೆಲವೊಂದು ಪದಾರ್ಥಗಳ ತಯಾರಿಕೆಯನ್ನು ಕೈಗೊಳ್ಳುವುದು.
5. ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಲು ವ್ಯವಸಾಯ ಕ್ಕಾಗಿ ಜಮೀನುಗಳನ್ನು ಕೊಳ್ಳುವುದು. ಇಲ್ಲವೆ ಬಾಡಿಗೆ ಕರಾರಿನ ಮೇಲೆ ಪಡೆಯುವುದು; ಮೊದಲಾದುವು.

ಒಟ್ಟಿನಲ್ಲಿ ಹೇಳುವುದಾದರೆ ಈ ಮುಂದಾಳುಗಳ ಉದ್ದೇಶ ಸದಸ್ಯರಿಗೆ ಬೇಕಾದುವುಗಳನ್ನು ಸಕಾಲಕ್ಕೆ ಸರಿಯಾದ ಪ್ರಮಾಣದಲ್ಲಿ ಒದಗಿಸುವುದು. ಈ ಸಂಸ್ಥೆಯಲ್ಲಿ ಸದಸ್ಯರು ತಮಗೆ ಬೇಕಾದ ಅವಶ್ಯಕತೆಗಳನ್ನು ತಿಳಿಸಿ ಅವುಗಳನ್ನು ಪಡೆಯುತ್ತಿದ್ದರಲ್ಲದೆ ಈ ವ್ಯವಹಾರದಿಂದ ಬಂದ ಲಾಭವನ್ನು ತಾವು ಹಂಚಿ ಕೊಳ್ಳುತ್ತಿದ್ದರು.

ಈ ಸಂಸ್ಥೆಯು ಗ್ರಾಹಕರ ಸಹಕಾರ ಸಂಘಗಳನ್ನು ಇತರೆಡೆಗಳಲ್ಲಿ ಸ್ಥಾಪಿಸಲು ಮಾದರಿಯಂತಾಯಿತು. ಈ ಮಾದರಿಯನ್ನು ಅನುಸರಿಸಿ ಇಂಗ್ಲೆಂಡಿನ ಇತರ ಪಟ್ಟಣಗಳಲ್ಲಿ ಸಹ ಗ್ರಾಹಕರ ಸಹಕಾರ ಸಂಘಗಳು ಆರಂಭವಾದವು. ಈ ಸಹಕಾರ ಸಂಘಗಳಿಗೆ 1851ರ ವರೆವಿಗೂ ಯಾವ ತರಹೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾನೂನಿನ ಬೆಂಬಲವೂ ಇರಲಿಲ್ಲ. 1852ರಲ್ಲಿ ಇಂಡಸ್ಟ್ರಿಯಲ್ ಮತ್ತು ಪ್ರಾವಿಡೆಂಟ್ ಸೊಸೈಟೀಸ್ ಆಕ್ಟ್ ಜಾರಿಗೆ ಬಂದನಂತರ ಈ ಸಹಕಾರ ಸಂಘಗಳು ಕಾನೂನಿನ ಚೌಕಟ್ಟಿಗೆ ಒಳಪಟ್ಟು ಕೆಲಸ ಮಾಡಲು ಅನುಕೂಲವಾಯಿತು. 1862ರ ಕಾನೂನಿನ ಪ್ರಕಾರ ಚಳುವಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಮಾನ್ಯತೆ ದೊರಕಿದವು. ಇದರಿಂದ ಸಹಕಾರದ ಸರ್ವತೋಮುಖ ಚಳವಳಿಗೆ ಅವಕಾಶವಾಯಿತು. 1881ರ ವೇಳೆಗೆ ಇಂಗ್ಲೆಂಡ್ ದೇಶದಲ್ಲಿ ಒಂದು ಸಾವಿರ ಪ್ರಾಥಮಿಕ ಗ್ರಾಹಕರ ಸಂಘಗಳು ಸ್ಥಾಪಿಸಲ್ಪಟ್ಟವು.

ರೈಫೀಸೆನ್, ಷುಲ್ಸ್ ಸಂಸ್ಥೆಗಳು : 19ನೆಯ ಶತಮಾನದ ಮಧ್ಯ ಭಾಗದಲ್ಲಿ ಜರ್ಮನಿಯಲ್ಲಿ ಗ್ರಾಮಾಂತರ ಮತ್ತು ಪಟ್ಟಣಗಳಲ್ಲಿ ವಾಸಿಸುತ್ತಿದ್ದ ಜನ ಧನಿಕರಾದ ಯಹೂದಿಗಳ (Jews) ಶೋಷಣೆಗೆ ಒಳಗಾಗಿ ಬಹಳ ಕಷ್ಟಪಡುತ್ತಿದ್ದರು. ಭಾರತದ ರೈತರಂತೆಯೇ ಜರ್ಮನಿ ದೇಶದ ರೈತರೂ ಹಣಕಾಸಿನ ತೊಂದರೆಯನ್ನು ಅನುಭವಿಸುತ್ತಿದ್ದರು. ಇದರಂತೆಯೇ ಕಾರ್ಮಿಕರೂ ಮತ್ತು ಕುಶಲಕರ್ಮಿಗಳೂ ನಾನಾ ಕಷ್ಟಗಳಿಗೆ ಒಳಗಾಗಿದ್ದರು. ಈ ಪರಿಸ್ಥಿತಿಯಲ್ಲಿ ಆ ದೇಶದಲ್ಲಿ ಸಹಕಾರ ಚಳವಳಿ ಪ್ರಾರಂಭವಾಯಿತು.

ಈ ಚಳವಳಿಗೆ ಇಬ್ಬರು ಮುಂದಾಳುಗಳಾದರು. ಅವರೇ ಹರ್ ಷುಲ್ಸ್ (1808–1883) ಮತ್ತು ಹರ್ ಎಫ್. ಡಬ್ಲ್ಯೂ. ರೈಫೀಸೆನ್ (1818–1888). ಈ ಇಬ್ಬರು ನಾಯಕರು ಆ ದೇಶದ ಜನರನ್ನು ಯಹೂದಿಗಳ ಬಡ್ಡಿಯ ಬವಣೆಯಿಂದ ಪಾರುಮಾಡಲು ಬಡಜನರಿಗೆ ಬೇಕಾದ ಹಣವನ್ನು ಅತಿ ಸುಲಭ ಬಡ್ಡಿ ದರದಲ್ಲಿ ಒದಗಿಸಲು ಸಹಕಾರ ಸಂಘದ ಅಗತ್ಯವನ್ನು ಕಂಡರು. ಪ್ರಾರಂಭದಲ್ಲಿ ಈ ತೆರನಾದ ಸಹಕಾರ ಸಂಘಗಳನ್ನು ತಮ್ಮ ಗ್ರಾಮದಲ್ಲಿ ಮೊದಲು ಮಾಡಿದರು. ಇವರು ಹಾಕಿದ ಯೋಜನೆಯಿಂದ ಆಲ್ಲಿನ ಜನಗಳಿಗೆ ಪರಸ್ಪರ ಸಹಕಾರದಿಂದ ಅವರ ಕಷ್ಟ ನಿವಾರಣೆ ಮಾಡಿಕೊಳ್ಳುವುದು ಸಾಧ್ಯವೆಂದು ಮನದಟ್ಟಾಯಿತು. ಇದೇ ಸಮಯಕ್ಕೆ ಸರಿಯಾಗಿ ಇಂಗ್ಲೆಂಡ್ ದೇಶದಲ್ಲಿ ರಾಬರ್ಟ್ ಓವೆನ್ ಮತ್ತು ರಾಕ್‌ಡೇಲಿನ ಮುಂದಾಳುಗಳು ಗ್ರಾಹಕರ ಸಹಕಾರ ಸಂಘಗಳ ಸ್ಥಾಪನೆ ಪ್ರಯತ್ನಗಳನ್ನು ಮಾಡುತ್ತಿದ್ದರು. ಷುಲ್ಸ್ ಸಾಲಸಹಕಾರ ಸಂಘಗಳನ್ನು ಪಟ್ಟಣವಾಸಿಗಳ ಅನುಕೂಲಕ್ಕೆ ಸ್ಥಾಪಿಸಿದರೆ ರೆಫೀಸೆನ್ ಗ್ರಾಮಾಂತರ ವಾಸಿಗಳ ಅನುಕೂಲಕ್ಕೆ ಗ್ರಾಮಾಂತರ ಸಾಲಸಹಕಾರ ಸಂಘಗಳನ್ನು ಸ್ಥಾಪಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ರೈಫೀಸೆನ್ ಮತ್ತು ಷುಲ್ಸ್ ಸ್ಥಾಪಿಸಿದ ಸಹಕಾರ ಸಂಘಗಳು ಒಂದೇ ಉದ್ದೇಶ ಹೊಂದಿದ್ದರೂ ಅವುಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಯಲ್ಲಿ ಕೆಲವೊಂದು ವ್ಯತ್ಯಾಸಗಳಿದ್ದವು. ಅವು ಯಾವುವೆಂದರೆ :

	ರೈಫೀಸೆನ್ ಪದ್ಧತಿ	ಷುಲ್ಸ್ ಪದ್ಧತಿ
1.	ಅಮಿತ ಜವಾಬ್ದಾರಿ	ಮಿತ ಜವಾಬ್ದಾರಿ
2.	ಗ್ರಾಮಾಂತರ ಪ್ರದೇಶಗಳಿಗೆ ಸೀಮಿತವಾಗಿತ್ತು.	ಪಟ್ಟಣಗಳಿಗೆ ಸೀಮಿತವಾಗಿತ್ತು
3.	ಆಡಳಿತ ವ್ಯಾಪ್ತಿ ಅತಿ ಸಂಕುಚಿತವಾಗಿತ್ತು.	ವಿಶಾಲವಾದ ಆಡಳಿತ ವ್ಯಾಪ್ತಿ ಇತ್ತು.
4.	ಸಾಮಾನ್ಯವಾಗಿ ಸದಸ್ಯತ್ವ ಗ್ರಾಮಾಂತರ ವಾಸಿಗಳಿಗೆ ಮಾತ್ರ. ಅದರಲ್ಲೂ ವ್ಯವಸಾಯಗಾರರಿಗೆ ಮಾತ್ರ ಇತ್ತು.	ಪಟ್ಟಣ ವಾಸಿಗಳಿಗೆ ಮಾತ್ರ ಸದಸ್ಯತ್ವ. ವ್ಯಾಪಾರಸ್ಥರಿಗೆ ಕಾರ್ಮಿಕರಿಗೆ ಕುಶಲ ಕರ್ಮಿಗಳಿಗೆ ಕೈಗಾರಿಕೋದ್ಯಮಿಗಳಿಗೆ ಅವಕಾಶವಿತ್ತು.
5.	ಸಾಲವನ್ನು ಆಯಾ ಸದಸ್ಯರ ಭದ್ರತೆ ಮತ್ತು ನೈತಿಕಮಟ್ಟಕ್ಕನುಗುಣವಾಗಿ ಒದಗಿಸಲಾಗುತ್ತಿತ್ತು.	ಸದಸ್ಯರ ಷೇರು ಬಂಡವಾಳಕ್ಕನುಗುಣವಾಗಿ ಸಾಲದ ಮೊಬಲಗನ್ನು ನಿರ್ಧರಿಸಲಾಗುತ್ತಿತ್ತು.
6.	ಸಾಲವನ್ನು ದೀರ್ಘಕಾಲ ಕಂತುಗಳಲ್ಲಿ ಮರು ಪಾವತಿಮಾಡಲು ಅವಕಾಶ ಇತ್ತು.	ಅಲ್ಪಾವಧಿ ಮಾತ್ರ ಸಾಲ ಒದಗಿಸಲಾಗುತ್ತಿತ್ತು.
7.	ಸಾಲವನ್ನು ಉತ್ಪಾದನಾ ಕಾರ್ಯಗಳಿಗೆ ಮಾತ್ರ ಒದಗಿಸಲಾಗುತ್ತಿತ್ತು ಮತ್ತು ಸಾಲದ ಉಪಯೋಗದ ಬಗ್ಗೆ ಹೆಚ್ಚಿನ ಮೇಲ್ವಿಚಾರಣೆ ಇರುತ್ತಿತ್ತು.	ಇಲ್ಲಿಯೂ ಸಾಲವನ್ನು ಉತ್ಪಾದನಾ ಕಾರ್ಯಗಳಿಗೆ ಮಾತ್ರ ಕೊಡುತ್ತಿದ್ದರು. ಆದರೆ ಸದಸ್ಯರು ಅವುಗಳನ್ನು ಉಪಯೋಗಿಸುವ ಬಗ್ಗೆ ಪರಿಣಾಮಕಾರಿ ಮೇಲ್ವಿಚಾರಣೆ ಇರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

8. ಸದಸ್ಯರಲ್ಲದವರ ಅವಶ್ಯಕತೆಗಳನ್ನು ಸಹ ಪೂರೈಸಲು ಅವಕಾಶವಿತ್ತು.	ಬ್ಯಾಂಕಿನ ವ್ಯವಹಾರದಲ್ಲಿ ಮಾತ್ರ ತೊಡಗಿದ್ದರಿಂದ ಸದಸ್ಯರಲ್ಲದವರ ಅವಶ್ಯಕತೆ ಬಗ್ಗೆ ಯಾವ ಕಾರ್ಯವನ್ನೂ ಕೈಗೊಳ್ಳುತ್ತಿರಲಿಲ್ಲ.
9. ಇಲ್ಲಿ ಕೆಲಸಮಾಡುತ್ತಿದ್ದವರು ಬಹುಭಾಗ ವೇತನವನ್ನು ಪಡೆಯುತ್ತಿರಲಿಲ್ಲ.	ವ್ಯವಹಾರದ ಬಗ್ಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರಿಂದ ಈ ಸಂಘಗಳು ವ್ಯವಹಾರ ಸಂಸ್ಥೆಗಳಾಗಿ ಕೆಲಸ ಮಾಡಬೇಕಾಗಿತ್ತು.

ಈ ಸಂಸ್ಥೆಗಳು ಅನುಸರಿಸಿದ ಮಾರ್ಗಗಳೇ ಪ್ರಪಂಚದ ಅನೇಕ ರಾಷ್ಟ್ರಗಳಿಗೆ ಇಂದಿಗೂ ಮಾದರಿಯಾಗಿವೆ. ಭಾರತ ದೇಶದಲ್ಲಿಯಾದರೋ ಈ ತತ್ತ್ವಗಳನ್ನು ಅನೇಕ ಸಹಕಾರ ಸಂಘಗಳು ಅಳವಡಿಸಿಕೊಂಡಿವೆ.

ಭಾರತದಲ್ಲಿ ಸಹಕಾರ

ನಿಮಗೆಲ್ಲಾ ತಿಳಿದಿರುವಂತೆ ಭಾರತ ವ್ಯವಸಾಯ ಪ್ರಧಾನವಾದ ದೇಶ. ದೇಶದ ಜನಸಂಖ್ಯೆಯಲ್ಲಿ ಶೇ. 70ಕ್ಕೂ ಹೆಚ್ಚು ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಇಲ್ಲಿಯ ವ್ಯವಸಾಯವು ಬಹಳ ಮಟ್ಟಿಗೆ ಅನೇಕ ವೇಳೆ ಪ್ರಕೃತಿಯ ವಿಕೋಪಕ್ಕೆ ಒಳಗಾಗುತ್ತಿರುವುದರಿಂದ, ವ್ಯವಸಾಯದಿಂದ ಪಡೆಯ ಬಹುದಾದ ಉತ್ಪತ್ತಿಯಲ್ಲಿ ನಿಖರತೆ ಇಲ್ಲದೆ ಈ ಜನರು ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಇದರ ಜೊತೆಗೆ ಬೆಳೆದ ಫಸಲಿಗೆ ದೊರಕಬಹುದಾದ ಬೆಲೆಯೂ ನಿರ್ದಿಷ್ಟವಾಗಿಲ್ಲ. ಇದರಿಂದಾಗಿ ರೈತರು ತಮ್ಮ ಅಗತ್ಯಗಳಿಗೆ ಸಾಹುಕಾರರಿಂದ ಪಡೆದ ಹಣವನ್ನು ಹಿಂದಿರುಗಿಸಲಾರದೆ ಬಡ್ಡಿ ಹೆಚ್ಚಾಗಿ ಒತ್ತೆ ಇಟ್ಟ ಸಾಮಾನು ಆಸ್ತಿಗಳನ್ನು ಕಳೆದುಕೊಳ್ಳುವುದರಲ್ಲಿ ಮುಕ್ತಾಯವಾಗುತ್ತಿತ್ತು. ಅನೇಕ ವೇಳೆ ಈ ರೀತಿಯ ಸಾಲವು ಅವರ ಮುಂದಿನ ಪೀಳಿಗೆಗಳನ್ನೂ ಬಾಧಿಸುತ್ತಿತ್ತು.

ಪಾಶ್ಚಿಮಾತ್ಯ ದೇಶದಲ್ಲಿ ಉಂಟಾದ ಔದ್ಯೋಗಿಕ ಕ್ರಾಂತಿ ಭಾರತದ ಮೇಲೂ ತನ್ನ ಪ್ರಭಾವವನ್ನು ಬೀರದಿರಲಿಲ್ಲ. ಯಾಂತ್ರೀಕರಣದ ಪರಿಣಾಮವಾಗಿ ಗಾಮಾಂತರ ಕೈಗಾರಿಕೆ ಅಸ್ತವ್ಯಸ್ತವಾಯಿತು. ಇದರಿಂದಾಗಿ ಅನೇಕರು ನಿರುದ್ಯೋಗಿಗಳಾದರು. ಇವರೆಲ್ಲರೂ ತಮ್ಮ ಜೀವನಕ್ಕೆ ಜಮೀನನ್ನೇ ಅವ

Sri Vidyabharathi Book Centre, Singeri

CC-O. In Public Domain. Digitized by eGangotri

ಲಂಬಿಸ ಬೇಕಾಯಿತು. ವ್ಯವಸಾಯ ಪದ್ಧತಿ ತೀರ ಹಳೆಯದಾಗಿದ್ದುದರಿಂದ ಉತ್ಪತ್ತಿ ಕಡಿಮೆಯಾಯಿತು. ಅವರ ಸಾಲಗಳು ಹೆಚ್ಚಾಗಿದ್ದವು. ಅನೇಕ ರೈತರ ಮನೆ ಹೊಲಗಳು ಸಾಹುಕಾರರ ವಶವಾದವು. ಕ್ರಿ. ಶ. 1876ರ ವೇಳೆಗೆ ಬಡ ಜನರು ಸಾಹುಕಾರರ ಶೋಷಣೆ, ಭೀಕರ ಬರಗಾಲ ಇವುಗಳಿಂದ ಪಡಬಾರದ ಕಷ್ಟಗಳನ್ನು ಅನುಭವಿಸಬೇಕಾಯಿತು. ಜನ ರೊಚ್ಚಿದ್ದು ಕೆಲವು ಕಡೆ ಸಾಹುಕಾರರ ಮನೆಗಳಿಗೆ ನುಗ್ಗಿ ಕಾಗದ ಪತ್ರಗಳನ್ನು ಸುಟ್ಟು ಮನೆಗಳಿಗೆ ಬೆಂಕಿ ಹಚ್ಚಿದರು. ಆಗಿನ ಬ್ರಿಟಿಷ್ ಸರ್ಕಾರ ಅದುವರೆಗೂ ಈ ರೈತರ ಅಭಿವೃದ್ಧಿಗೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ.

ಕ್ರಿ. ಶ. 1879ರಲ್ಲಿ ಮೊದಲ ಬಾರಿಗೆ ರೈತರ ಪರಿಹಾರ ಕಾಯಿದೆಯನು ಜಾರಿಗೆ ತರಲಾಯಿತು. ಇದರ ಪ್ರಕಾರ ಜಮೀನುಗಳ ಹಸ್ತಾಂತರವನ್ನು ಮತ್ತು ಹೆಚ್ಚು ಬಡ್ಡಿ ವಸೂಲಿಯನ್ನು ಸ್ವಲ್ಪಮಟ್ಟಿಗೆ ತಡೆಯಲಾಯಿತು. 1883ರಲ್ಲಿ ಭೂ ಅಭಿವೃದ್ಧಿ ಸಾಲದ ಕಾಯಿದೆ (Land Improvement Loan Act) ಎಂಬ ಮತ್ತೊಂದು ಕಾನೂನು ಜಾರಿಗೆ ಬಂತು. ಇದರಂತೆ ರೈತರಿಗೆ ಜಮೀನು ಸುಧಾರಣೆಗಾಗಿ ಮತ್ತು ಜಮೀನಿನಲ್ಲಿ ಉತ್ಪತ್ತಿಯನ್ನು ಹೆಚ್ಚಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲಕೊಡುವ ವ್ಯವಸ್ಥೆ ಮಾಡಲಾಯಿತು. ಇದಾದನಂತರ ಬರಗಾಲಕ್ಕೆ ಒಳಗಾಗಿ ಕಷ್ಟಪಡುತ್ತಿದ್ದ ರೈತರ ಪರಿಹಾರಕ್ಕೆ ವ್ಯವಸಾಯದ ಕಾಯಿದೆ 1884ರಲ್ಲಿ ಜಾರಿಗೆ ಬಂತು.

ಈ ಮೂರು ಕಾನೂನುಗಳಿಂದ ರೈತರಿಗೆ ನಿರೀಕ್ಷಿಸಿದಷ್ಟು ಪರಿಹಾರ ದೊರಕಲಿಲ್ಲ. ಜರ್ಮನಿಯಲ್ಲಿ ರೈಫೀಸೆನ್ ಸಾಲದ ಸಂಘಗಳ ಸ್ಥಾಪನೆಯ ಬಗ್ಗೆ ನಡೆಸಿದ ಪ್ರಯೋಗ ಭಾರತದ ಆಗಿನ ಮದ್ರಾಸ್ ಸರ್ಕಾರದ ಗಮನ ಸೆಳೆಯಿತು. ಆ ಪ್ರಯೋಗವನ್ನು ಭಾರತದಲ್ಲಿಯೂ ಅನುಸರಿಸುವ ಬಗ್ಗೆ ವಿಚಾರ ನಡೆಯಿತು. ಜರ್ಮನಿಯಲ್ಲಿ ನಡೆದ ಪ್ರಯೋಗವನ್ನು ಅಭ್ಯಸಿಸಿ ವರದಿ ಮಾಡಲು ಮದ್ರಾಸ್ ಸರ್ಕಾರ ಸರ್ ಫ್ರೆಡ್ರಿಕ್ ನಿಕಲ್‌ಸನ್ನನನ್ನು ಜರ್ಮನಿಗೆ ಕಳಿಸಿತು. ಆತ ತನ್ನ ವರದಿಯನ್ನು 1895 ಮತ್ತು 1897ರಲ್ಲಿ ಎರಡು ಸಂಪುಟಗಳಲ್ಲಿ ಒಪ್ಪಿಸಿದ. ಆತ ರೈಫೀಸೆನ್ ಮಾದರಿಯ ಸಹಕಾರ ಸಂಘಗಳನ್ನು ಭಾರತದಲ್ಲಿ ಸ್ಥಾಪಿಸಬೇಕೆಂದು ವರದಿ ಮಾಡಿದ್ದ. ಇದೇ ಸಮಯದಲ್ಲಿ ಉತ್ತರ ಪ್ರದೇಶದ ಸರ್ಕಾರ ತನ್ನ ಪ್ರಾಂತ್ಯಕ್ಕೆ ಸರಿಹೋಗಬಹುದಾದ ಸಂಘಗಳನ್ನು ಸ್ಥಾಪಿಸಲು ಡುಫರ್ನೆ ಎಂಬುವನನ್ನು ನಿಯಮಿಸಿತು. ಆತ ತನ್ನ "ಉತ್ತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತಕ್ಕೆ ಜನತಾ ಬ್ಯಾಂಕುಗಳು" ಎಂಬ ವರದಿಯಲ್ಲಿ ರೈಫೀಸೆನ್ ಮಾದರಿಯ ಸಹಕಾರ ಸಂಘಗಳೇ ಸೂಕ್ತವೆಂದಿದ್ದ. ಈ ಶಿಫಾರ್ಸುಗಳ ಹಿನ್ನಲೆಯಲ್ಲಿ ಆಗಿನ ಬ್ರಿಟಿಷ್ ಸರ್ಕಾರ ಆಗಿನ ಕಾಯಿದೆ ಮಂತ್ರಿಯಾಗಿದ್ದ ಸರ್ ಎಡ್ವರ್ಡ್‌ನ ಅಧ್ಯಕ್ಷತೆಯಲ್ಲಿ ಡುಫರ್ನೆ ಮತ್ತು ನಿಕಲ್ಸನ್ನರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಶಿಫಾರ್ಸುಗಳ ಮೇರೆಗೆ 1904 ಮಾರ್ಚ್ 26ರಿಂದ ಸಹಕಾರಿ ಹಣಕಾಸಿನ ಸಂಘಗಳ ಕಾಯಿದೆ ಜಾರಿಗೆ ಬಂತು.

ಈ ಕಾಯಿದೆ ಪ್ರಕಾರ ಆಗಿದ್ದ ಪ್ರಾಂತ್ಯ ಸರ್ಕಾರಗಳಿಗೆ ಸಹಕಾರ ಸಂಘಗಳ ರಿಜಿಸ್ಟ್ರಾರರನ್ನು ನೇಮಿಸುವುದಕ್ಕೆ ಅಲ್ಲದೆ, ಸಾಲದ ಸಹಕಾರ ಸಂಘಗಳನ್ನು ಗ್ರಾಮಾಂತರ ಮತ್ತು ಪಟ್ಟಣ ಸಹಕಾರ ಸಂಘಗಳನ್ನು ವರ್ಗೀಕರಿಸಲೂ ಅವಕಾಶವಾಯಿತು. ಗ್ರಾಮಾಂತರ ಸಂಘಗಳು ಅನಿಯಮಿತ ಜವಾಬ್ದಾರಿಯ (Unlimited Liability) ಮೇಲೂ ಪಟ್ಟಣದ ಸಂಘಗಳು ನಿಯಮಿತ ಜವಾಬ್ದಾರಿಯ (Limited Liability) ಮೇಲೂ ಸ್ಥಾಪಿಸಲು ಅವಕಾಶವಾಯಿತು. ಒಟ್ಟಿನಲ್ಲಿ 1904ರ ಕಾನೂನು ಭಾರತದಲ್ಲಿ ಸಹಕಾರ ಸಂಘಗಳ ಸ್ಥಾಪನೆಗೆ ನಾಂದಿಯಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕದಲ್ಲಿ ಸಹಕಾರ ಯೋಜನೆ

ಈ ಕಾನೂನಿನ ಆಧಾರದ ಮೇಲೆಯೇ ಹಿಂದಿನ ಮೈಸೂರಿನಲ್ಲಿ ಮೊಟ್ಟ ಮೊದಲನೆಯದಾಗಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಸೊಸೈಟಿ 1904 ರಲ್ಲಿ ಸ್ಥಾಪಿತವಾಯಿತು. ಈ ಸಂಘವು ಸಹಕಾರದ ತತ್ತ್ವದ ಮೇಲೆ ಸ್ಥಾಪಿಸಿದ ಮೊಟ್ಟ ಮೊದಲನೆಯ ಸಂಘ. ಈ ಸಂಘವು ಈಗಲೂ ಚಾಮರಾಜಪೇಟೆಯ ಮೊದಲನೆಯ ರಸ್ತೆಯಲ್ಲಿ ತನ್ನ ಸ್ವಂತ ಕಟ್ಟಡದಲ್ಲಿ ಕೆಲಸಮಾಡುತ್ತಿದೆ.

1904ರ ಕಾಯಿದೆ ಪ್ರಕಾರ ಸಾಲದ ಸಹಕಾರ ಸಂಘಗಳಲ್ಲದೆ ಬೇರೆ ಸಂಘಗಳನ್ನು ಸ್ಥಾಪಿಸಲಾಗುತ್ತಿರಲಿಲ್ಲ. ಅಲ್ಲದೆ ಗ್ರಾಮಾಂತರ ಸಹಕಾರ ಸಂಘಗಳು ತಾವು ಗಳಿಸಿದ ಲಾಭವನ್ನು ಪೂರ್ಣ ಆಪದ್ಧನ ನಿಧಿಗೆ (Reserved Fund) ಸೇರಿಸಬೇಕಾಗಿತ್ತು. ಇದರಿಂದಾಗಿ ಷೇರುಗಳ ಮೇಲೆ ಡಿವಿಡೆಂಡ್ (ನಫೆ) ಹಂಚಲು ಆಗುತ್ತಿರಲಿಲ್ಲ. ಈ ನ್ಯೂನತೆಗಳನ್ನು ಸರಿಪಡಿಸಲು 1909ರಲ್ಲಿ ಪ್ರಾಂತೀಯ ಸರ್ಕಾರಗಳ ರಿಜಿಸ್ಟ್ರಾರರ ಸಭೆಯನ್ನು ಆಗಿನ ಸರ್ಕಾರ ಕರೆಯಿತು. ಈ ಸಭೆಯು ಮಾಡಿದ ಶಿಫಾರ್ಸಿನ ಮೇರೆಗೆ 1912ರಲ್ಲಿ ಸಹಕಾರಿ ಕಾನೂನು ಮಾರ್ಪಾಡಾಯಿತು.

1912ರ ಕಾನೂನು ಪ್ರಕಾರ ದೇಶದಲ್ಲಿ ಎಲ್ಲ ವಿಧದ ಸಹಕಾರ ಸಂಘಗಳನ್ನು ಸ್ಥಾಪಿಸಲು ಅನುಕೂಲವಾಯಿತು. ಗ್ರಾಮಾಂತರ ಸಹಕಾರ ಸಂಘಗಳಲ್ಲಿಯೂ ಸಹ ಗಳಿಸಿದ ಶೇ. 25ರಷ್ಟು ಲಾಭವನ್ನು ಮಾತ್ರ ಆಪದ್ಧನ ನಿಧಿಗೆ ಸೇರಿಸಿ ಉಳಿದ ಲಾಭದಲ್ಲಿ ಷೇರಿನ ಮೇಲೆ ಸದಸ್ಯರಿಗೆ ನಫೆ ಹಂಚಲು ಅವಕಾಶವಾಯಿತು.

1919ರ ರಾಜ್ಯಾಂಗದ ತಿದ್ದುಪಡಿ ಪ್ರಕಾರ ಸಹಕಾರ ಖಾತೆಯು ಪ್ರಾಂತೀಯ ಸರ್ಕಾರದ ಆಡಳಿತಕ್ಕೆ ಒಳಪಟ್ಟಿತ್ತು. ಇದರಂತೆ ಅನೇಕ ಪ್ರಾಂತೀಯ ಸರ್ಕಾರಗಳು ತಮ್ಮವೇ ಆದ ಸಹಕಾರ ಕಾಯಿದೆಗಳನ್ನು ತಂದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳೆಯ ಮೈಸೂರು ರಾಜ್ಯದಲ್ಲಿ 1918ರಲ್ಲಿಯೇ ಸಹಕಾರ ಸಂಘಗಳ ಕಾಯಿದೆಯನ್ನು ಜಾರಿಗೆ ತರಲಾಯಿತು. ಆದರಂತೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಸಹಕಾರ ಸಂಘಗಳನ್ನು ಅನಿಯಮಿತ ಜವಾಬ್ದಾರಿಯಂತೆ ಸ್ಥಾಪಿಸುವುದರ ಜೊತೆಗೆ ಪಟ್ಟಣಗಳಲ್ಲಿ ನಿಯಮಿತ ಜವಾಬ್ದಾರಿಯ ಮೇಲೆ ಸಹಕಾರ ಸಂಘಗಳನ್ನು ಸ್ಥಾಪಿಸಲು ಅನುಕೂಲವಾಯಿತು. ಇದರಂತೆ ಬೆಂಗಳೂರಿನ ಸೆಂಟ್ರಲ್ ಕೋ – ಆಪರೇಟೀವ್ ಬ್ಯಾಂಕ್, ಬೆಂಗಳೂರು ಸಹಕಾರ ಎಪೆಕ್ಸ್ ಬ್ಯಾಂಕ್, ಮೈಸೂರು ಸ್ಟೇಟ್ ಸಹಕಾರ ಭೂ ಅಡಮಾನ ಬ್ಯಾಂಕು ಮತ್ತು ಮೈಸೂರು ಸಹಕಾರ ಇನ್‌ಸ್ಟಿಟ್ಯೂಟ್ ಸ್ಥಾಪಿತವಾದವು. ಇವುಗಳೆಲ್ಲವುಗಳ ಸ್ಥಾಪನೆಗೆ ಆಗಿನ ಮೈಸೂರು ಸಂಸ್ಥಾನದ ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ ಪ್ರೋತ್ಸಾಹವೇ ಕಾರಣ. ಇವರ ಜೊತೆಗೆ ಆಗಿನ ಕಾಲದಲ್ಲಿ ಜನಪ್ರಿಯ ರಿಜಿಸ್ಟ್ರಾರರಾಗಿದ್ದ ಕೆ. ಎಚ್. ರಾಮಯ್ಯನವರು* ಬಹಳವಾಗಿ ಶ್ರಮಿಸಿದರು. ಅವರು ತಮ್ಮ ಅಧಿಕಾರಾವಧಿಯಲ್ಲಿ ಸಹಕಾರ ತತ್ತ್ವವನ್ನು ಗ್ರಾಮಾಂತರ ಪ್ರದೇಶಗಳಲ್ಲೆಲ್ಲ ಮನದಟ್ಟಾಗುವಂತೆ ಪ್ರಚಾರ ಕೈಗೊಂಡಿದ್ದರಿಂದ ಅನೇಕ ಗ್ರಾಮಾಂತರ ಮುಂದಾಳುಗಳು ಈ ಸಂಘಗಳ ಸ್ಥಾಪನೆ ಬಗ್ಗೆ ಆಸ್ಥೆವಹಿಸಿದ್ದರು. ಕೆ. ಎಚ್. ರಾಮಯ್ಯನವರ ದೂರದೃಷ್ಟಿ ಮತ್ತು ಯುವರಾಜರೊಂದಿಗಿದ್ದ ಅವರ ಆತ್ಮೀಯತೆಯಿಂದ ಮೈಸೂರು ದೇಶದಲ್ಲಿ ವಿವಿಧ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದವು.

1947ರಲ್ಲಿ ರಾಜಕೀಯ ಸ್ವಾತಂತ್ರ್ಯ ಬಂದನಂತರ ಸಾಮಾನ್ಯ ಜನರ ಅವಶ್ಯಕತೆಗಳನ್ನು ಪೂರೈಸಲು ಸಹಕಾರ ಸಂಘಗಳ ಮುಖಾಂತರವೇ ಸಾಧ್ಯವೆಂದು ಅರಿತು ಮೈಸೂರು ಸರ್ಕಾರ ಸಹಕಾರ ಸಂಘದ ಕಾಯಿದೆಯನ್ನು 1948ರಲ್ಲಿ ಪುನಃ ತಿದ್ದುಪಡಿ ಮಾಡಿತು. ಇದರಿಂದ ಸಹಕಾರ ಸಂಘಗಳ ಸ್ಥಾಪನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿದ್ದ ಕೆಲವೊಂದು ನ್ಯೂನತೆಗಳನ್ನು ಸರಿಪಡಿಸಲು ಸಾಧ್ಯವಾಯಿತಲ್ಲದೆ ಹೊಸದಾಗಿ ಸಹಕಾರಿ ಗೃಹ ನಿರ್ಮಾಣ ಸಂಸ್ಥೆಗಳು, ಕೈಗಾರಿಕಾ ಸಹಕಾರ ಸಂಘಗಳು, ವಿವಿಧೋದ್ದೇಶ ಸಹಕಾರ ಸಂಘಗಳು, ಮಾರಾಟ ಸಹಕಾರ ಸಂಘಗಳು ಮೊದಲಾದುವುಗಳನ್ನು ಸ್ಥಾಪಿಸಲಾಯಿತು. ಅಲ್ಲದೆ ಸಹಕಾರ ಸಂಘಗಳ ಮುಖಾಂತರ ರೈತರಿಗೆ

* ಇದೇ ಪ್ರಕಾಶನಮಾಲೆಯ 'ಕೆ. ಎಚ್. ರಾಮಯ್ಯನವರು' ಎಂಬ ಪುಸ್ತಕವನ್ನು ಓದಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಕೆ. ಎಚ್. ರಾಮಯ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಶ್ಯಕವಾಗಿ ಬೇಕಾಗಿದ್ದ ವ್ಯವಸಾಯ ಉಪಕರಣಗಳು ಮತ್ತು ರಾಸಾಯನಿಕ ಗೊಬ್ಬರಗಳು ಮೊದಲಾದುವುಗಳನ್ನು ಒದಗಿಸಲು ಏರ್ಪಾಡಾಯಿತು.

ರಿಸರ್ವ್ ಬ್ಯಾಂಕು ಅಖಿಲ ಭಾರತದ ಸಾಲದ ಪರಿಶೀಲನಾ ಸಮಿತಿಯನ್ನು ನಿಯಮಿಸಿತು. ಈ ಸಮಿತಿಯು ತನ್ನ ವರದಿಯನ್ನು 1954ರ ಡಿಸೆಂಬರ್ ತಿಂಗಳಲ್ಲಿ ಪ್ರಕಟಿಸಿತು. ಈ ಸಮಿತಿಯು ಸಹಕಾರದ ಬೆಳವಣಿಗೆಯ ಸಲುವಾಗಿ ಮಹತ್ವವಾದ ಸಲಹೆಗಳನ್ನು ಮಾಡಿತು. ಈ ಸಲಹೆಗಳನ್ನು 1955ರಲ್ಲಿ ಪಾಟ್ನಾದಲ್ಲಿ ಸೇರಿದ್ದ ಸಹಕಾರ ಪರಿಷತ್ತು ಒಪ್ಪಿಕೊಂಡಿತು. ಇದರಂತೆ 1955ರ ಏಪ್ರಿಲ್ ತಿಂಗಳಲ್ಲಿ ಸೇರಿದ್ದ ಸಹಕಾರ ಮಂತ್ರಿಗಳ ಸಭೆ ಒಪ್ಪಿಕೊಂಡಿದ್ದರ ಸಲುವಾಗಿ ಸಹಕಾರ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಯಿತು.

1957ರ ಜೂನ್ ತಿಂಗಳಲ್ಲಿ ಭಾರತ ಸರ್ಕಾರದಿಂದ ರಚಿಸಲ್ಪಟ್ಟ ಸಹಕಾರ ಕಾಯಿದೆ ಸಮಿತಿಯು ರಾಜ್ಯ ಸರ್ಕಾರಗಳಿಗೆ ಮಾದರೀ ಮಸೂದೆಯನ್ನು ಸೂಚಿಸಿ ಇದರಂತೆ ಸಹಕಾರಿ ಕಾಯಿದೆ ಸರಳವಾಗಲು ನೆರವಾಯಿತಲ್ಲದೆ ಸರ್ಕಾರ ಅಥವಾ ಅಧಿಕಾರಿಗಳ ಹತೋಟಿ ಎಷ್ಟೊ ಕಡಿಮೆಯಾಯಿತು. ಅಧಿಕಾರೇತರರಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟಿತು. ಜೊತೆಗೆ ರಾಜ್ಯಗಳ ಪುನರ್ವಿಂಗಡನೆಯನಂತರ ವಿವಿಧ ರಾಜ್ಯಗಳಲ್ಲಿದ್ದ ಅಂದರೆ, ಬೊಂಬಾಯಿ ಕರ್ನಾಟಕ, ಹೈದರಾಬಾದ ಕರ್ನಾಟಕ, ಮಂಗಳೂರು, ಕೊಡಗು ಮತ್ತು ಹಳೆಯ ಮೈಸೂರು ಭಾಗಗಳಲ್ಲಿದ್ದ ಸಹಕಾರ ಸಂಘಗಳ ಕಾಯಿದೆಯನ್ನು ಸಮನ್ವಯಗೊಳಿಸುವ ಸಲುವಾಗಿ, ಸಹಕಾರ ಸಂಘಗಳ ಕಾಯಿದೆಯಲ್ಲಿ 1959ರಲ್ಲಿ ತಿದ್ದುಪಡಿಮಾಡಲಾಯಿತು. ಈ ಕಾಯಿದೆಯನ್ನು 1960 ಜೂನ್ ತಿಂಗಳಿಂದ ಜಾರಿಗೆ ತರಲಾಯಿತು. ಈ ರೀತಿ ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಸ್ಥಾಪನೆ ಬೆಳವಣಿಗೆ ಮತ್ತು ಪೋಷಣೆಗೆ ಅನುಕೂಲವಾಗುವ ವಾತಾವರಣವನ್ನು ಕಲ್ಪಿಸಲಾಯಿತು.

ಕರ್ನಾಟಕ ರಾಜ್ಯವು ಬಹಳ ಉತ್ತಮವಾದ ನೈಸರ್ಗಿಕ ಸಂಪತ್ತನ್ನು ಹೊಂದಿದೆ. ಬೆಟ್ಟಗಳು, ಕಾಡುಗಳು, ನದಿಗಳು, ಕೆರೆಗಳು, ಮೈದಾನ ಪ್ರದೇಶಗಳು, ಖನಿಜಸಂಪತ್ತು ಮುಂತಾದುವು ನೈಸರ್ಗಿಕ ಸಂಪತ್ತಿಗೆ ಸೇರಿದ ಕೆಲವು ಭಾಗಗಳು. ಇಲ್ಲಿನ ಜನ ಬಹಳ ಹೆಚ್ಚಾಗಿ ವ್ಯವಸಾಯವನ್ನು ಅವಲಂಬಿಸಿ ಜೀವನ ನಡೆಸುತ್ತಿರುತ್ತಾರೆ. ನೀವು ಗ್ರಾಮಾಂತರ ಪ್ರದೇಶಗಳಿಗೆ ಭೇಟಿ ಕೊಟ್ಟಾಗ ಇವನ್ನು ಕಾಣಬಹುದು. ಭತ್ತ, ಜೋಳ, ರಾಗಿ, ಕಡಲೆ, ಹುರುಳಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರೆ, ತೊಗರಿ–ಕಡಲೆ ಕಾಯಿ, ಎಳ್ಳು, ಸೂರ್ಯಕಾಂತಿ, ಮೆಣಸಿನಕಾಯಿ, ಹತ್ತಿ, ಕಬ್ಬು ಮೊದಲಾದವುಗಳನ್ನು ಬೆಳೆಯುತ್ತಾರೆ. ಇದಲ್ಲದೆ ಕಾಫಿ, ಏಲಕ್ಕಿ, ಅಡಕೆ, ತೆಂಗು, ಬಾಳೆ ತೋಟಗಳನ್ನೂ ನೀವು ನೋಡಿರಬಹುದು. ಕೆಲವರು ಹಣ್ಣು, ತರಕಾರಿ, ಹೂ ಮೊದಲಾದುವುಗಳನ್ನೂ ಬೆಳೆಯುತ್ತಾರೆ. ಮತ್ತೆ ಕೆಲವರು ಕೆಲವು ಉದ್ಯೋಗದಲ್ಲಿ ನಿರತರಾಗಿರುತ್ತಾರೆ. ಅವುಗಳಲ್ಲಿ ಮುಖ್ಯವಾದುದೆಂದರೆ ನೂಲುವ ನೇಯುವಕೆಲಸ, ಮರಗೆಲಸ, ಕಬ್ಬಿಣದ ಕೆಲಸ, ಕೂಲಿ ಕೆಲಸ ಮೊದಲಾದುವು. ಇನ್ನೂ ಕೆಲವರು, ವ್ಯವಸಾಯದ ಕೆಲಸದ ಜೊತೆಗೆ ಅಥವಾ ಪ್ರತ್ಯೇಕವಾಗಿ, ಹಸುಗಳನ್ನು ಸಾಕುವುದು, ಕೋಳಿಗಳನ್ನು ಸಾಕುವುದು, ಕುರಿಗಳನ್ನು ಸಾಕುವುದು, ಹಂದಿಗಳನ್ನು ಸಾಕುವುದು, ಮೀನುಗಳನ್ನು ಸಾಕಿ ಬೆಳೆಸಿ ಮಾರುವುದು ಮೊದಲಾದುವುಗಳಲ್ಲಿ ನಿರತರಾಗಿರುತ್ತಾರೆ.

ಪಟ್ಟಣಗಳಲ್ಲಿ ಜನರು ಆಫೀಸುಗಳಲ್ಲಿ ಕಾರ್ಖಾನೆಗಳಲ್ಲಿ ವ್ಯಾಪಾರದಲ್ಲಿ ಬ್ಯಾಂಕುಗಳು ಮೊದಲಾದ ಕಡೆಗಳಲ್ಲಿ ಕೆಲಸಮಾಡಿ ತಮ್ಮ ಜೀವನವನ್ನು ನಡೆಸುತ್ತಾರೆ. ಬಾಲಕ ಬಾಲಕಿಯರು ಶಾಲೆಗಳಲ್ಲಿ ವಿದ್ಯಾಭ್ಯಾಸ ಜ್ಞಾನಾರ್ಜನೆಯಲ್ಲಿ ನಿರತರಾಗಿರುತ್ತಾರೆ.

ಈ ಎಲ್ಲ ಚಟುವಟಿಕೆಗಳು ಸುಗಮವಾಗಿ ಸಾಗಬೇಕಾದರೆ ಪರಸ್ಪರ ಸಹಕಾರ ಅಗತ್ಯ. ಪ್ರತಿಯೊಂದು ಕಾರ್ಯದಲ್ಲಿ ಯಾವ ರೀತಿ ಸಹಕಾರ ಅಗತ್ಯ ಮತ್ತು ಅದರ ಬಗ್ಗೆ ಇರುವ ಯೋಜನೆಯೇನು ಎಂಬುದನ್ನು ತಿಳಿಯೋಣ.

ವ್ಯವಸಾಯ: ರೈತನು ವ್ಯವಸಾಯ ಕೆಲಸ ಕೈಗೊಳ್ಳಬೇಕಾದರೆ ಅವನಿಗೆ ಸಾಕಷ್ಟು ಜಮೀನಿರಬೇಕು. ನೀರಿನ ಸೌಕರ್ಯ, ವ್ಯವಸಾಯಕ್ಕೆ ಬೇಕಾದ ಇತರ ವಸ್ತುಗಳು ಎಂದರೆ ನೇಗಿಲು ಎತ್ತುಗಳು ಬೀಜ ಗೊಬ್ಬರ ಕ್ರಿಮಿಗಳನ್ನು ನಾಶಪಡಿಸಲು ಔಷಧಿ ಮೊದಲಾದುವುಗಳು ಇರಬೇಕು. ಇವನ್ನು ಪಡೆಯಬೇಕಾದರೆ ಸಾಕಷ್ಟು ಹಣದ ನೆರವು ಅಗತ್ಯ; ಏಕೆಂದರೆ ಈ ಎಲ್ಲ ವಸ್ತುವೂ ಎಲ್ಲರಲ್ಲಿಯೂ ಸಾಕಷ್ಟು ದೊರೆಯಲಾರದು. ಕೆಲವರಿಗೆ ಜಮೀನು ಹೆಚ್ಚಾಗಿರಬಹುದು. ಮತ್ತೆ ಕೆಲವರಿಗೆ ಜಮೀನು ಸಾಕಷ್ಟು ಇಲ್ಲದಿರಬಹುದು. ಇನ್ನೂ ಕೆಲವರು ಜಮೀನೇ ಇಲ್ಲದೆ ಕೂಲಿ ಮಾಡುತ್ತಿರಬಹುದು. ಕೆಲವು ಕಡೆ ಸದಾಕಾಲವೂ ನೀರು ಸಿಕ್ಕಬಹುದು. ಕೆಲವು ಕಡೆ ವ್ಯವಸಾಯವನ್ನು ಬರೀ ಮಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶ್ರಯದಿಂದ ಮಾಡಬೇಕಾಗಬಹುದು. ಹೀಗಾಗಿ ವ್ಯವಸಾಯವು ಒಂದು ಕಷ್ಟಕರವಾದ ಉದ್ಯೋಗವೆಂದು ಅನೇಕರು ಅಭಿಪ್ರಾಯಪಡುತ್ತಾರೆ.

ನಮ್ಮ ರಾಜ್ಯದಲ್ಲಿ ಅನೇಕ ನದಿಗಳು ಮಳೆಗಾಲದಲ್ಲಿ ತುಂಬಿ ಹರಿದು ಬೇಸಿಗೆಯಲ್ಲಿ ಬತ್ತಿಹೋಗುತ್ತವೆ. ನೀರಿನ ಸೌಲಭ್ಯವನ್ನು ಸದಾಕಾಲ ಪಡೆಯಲು ಸೂಕ್ತವಾದ ಕಡೆ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಶೇಖರಿಸಿ ಕಾಲುವೆಗಳ ಮುಖಾಂತರ ಹರಿಸಿದರೆ ಜಮೀನುಗಳ ವ್ಯವಸಾಯಕ್ಕೆ ಯೋಗ್ಯವಾಗಿ ರೈತರಿಗೆ ಹೆಚ್ಚು ಬೆಳೆಯಲು ಅನುಕೂಲವಾಗುತ್ತದೆ. ನಮ್ಮ ರಾಜ್ಯ ಸರ್ಕಾರದವರು ಅನೇಕ ಅಣೆಕಟ್ಟುಗಳನ್ನು ನಿರ್ಮಿಸಿದ್ದಾರೆ. ನಿರ್ಮಿಸುತ್ತಿದ್ದಾರೆ. ಕೃಷ್ಣರಾಜಸಾಗರ, ವಾಣೀವಿಲಾಸ ಸಾಗರ, ತುಂಗಭದ್ರ, ಮಲಪ್ರಭಾ, ಘಟಪ್ರಭಾ, ಹೇಮಾವತಿ ಜಲಾಶಯಗಳನ್ನು ನೀವು ಕೇಳಿರಬಹುದು; ಕೆಲವೊಂದನ್ನು ನೀವು ನೋಡಿರಬಹುದು. ಇದೇ ರೀತಿ ಕೆರೆಗಳ ಆಶ್ರಯದಲ್ಲಿಯೂ ಸಹ ಸಾವಿರಾರು ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದೆ. ಇದರ ಜೊತೆಗೆ ಬಾವಿಗಳನ್ನು ತೋಡುವುದರಿಂದ ಮತ್ತು ನಾಲೆಗಳಿಂದ ಎತ್ತರ ಪ್ರದೇಶಗಳಿಗೆ ನೀರೆತ್ತುವುದರಿಂದ ಕೆಲವು ಸಹಸ್ರ ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದೆ. ನಿಮಗೆ ಗೊತ್ತಿರುವಂತೆ ನೀರಾವರಿ ಆಶ್ರಯವಿರುವ ಜಮೀನುಗಳಲ್ಲಿ ಬೆಳೆಗಳು ಸಾಮಾನ್ಯವಾಗಿ ಒಣಗಿ ಹಾಳಾಗುವುದಿಲ್ಲ.

ಇದರ ಜೊತೆಗೆ ಕೆಲವು ನದಿಗಳ ನೀರನ್ನು ವಿದ್ಯುಚ್ಛಕ್ತಿಯ ಉತ್ಪಾದನೆಗೂ ಉಪಯೋಗಿಸಿಕೊಂಡಿರುತ್ತಾರೆ. ಇವುಗಳಲ್ಲಿ ಶಿಂಷಾ, ಶರಾವತಿ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳ ಹೆಸರುಗಳನ್ನು ನೀವು ಕೇಳಿರಬಹುದು. ಕಾಳಿನದಿ ಯೋಜನೆ ವಿಷಯ ನೀವು ಪತ್ರಿಕೆಗಳಲ್ಲಿ ಓದಿರಬಹುದು; ಈ ಯೋಜನೆಯನ್ನು ನಮ್ಮ ಸರ್ಕಾರದವರು ತ್ವರಿತಗತಿಯಿಂದ ಪೂರ್ಣಗೊಳಿಸಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಈ ಯೋಜನೆಗಳಿಂದ ಪಟ್ಟಣಗಳಿಗೆ, ಮನೆಗಳಿಗೆ, ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದರ ಜೊತೆಗೆ ನೀರೆತ್ತುವ ಪಂಪುಸೆಟ್ಟುಗಳಿಗೂ ಒದಗಿಸಬಹುದು.

ಈ ರೀತಿಯ ಸೌಲಭ್ಯಗಳನ್ನು ಮಾನವನು ತನ್ನ ಆರ್ಥಿಕ ಉನ್ನತಿಗೆ ಉಪಯೋಗಿಸಿಕೊಳ್ಳಲು ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿಕೊಳ್ಳುವುದರಿಂದ ಬಹುಮಟ್ಟಿಗೆ ಅನುಕೂಲವಾಗುವುದು. ಈಗಾಗಲೆ ಕರ್ನಾಟಕ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ್ಯದಲ್ಲಿ ಸುಮಾರು 20,000 ಸಹಕಾರ ಸಂಘಗಳಿವೆ. ಗ್ರಾಮಾಂತರ ಸೇವಾ ಸಹಕಾರ ಸಂಘಗಳು, ಬೇಸಾಯ ಸಹಕಾರ ಸಂಘಗಳು, ನೀರೆತ್ತುವ (Lift Irrigation) ಸಹಕಾರ ಸಂಘಗಳು, ಜಮೀನು ಅಭಿವೃದ್ಧಿ ಬ್ಯಾಂಕುಗಳು, ಮಾರಾಟ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಸಹಕಾರ ಬ್ಯಾಂಕುಗಳು, ಸಹಕಾರಿ ಸಕ್ಕರೆ ಕಾರ್ಖಾನೆಗಳು, ಹತ್ತಿಗಿರಣಿಗಳು, ಕಾಫಿ ಬೆಳೆಗಾರರ ಸಹಕಾರ ಸಂಘ, ಕಿತ್ತಳೆ ಬೆಳೆಗಾರರ ಸಂಘ, ಏಲಕ್ಕಿ ಬೆಳೆಗಾರರ ಸಹಕಾರ ಸಂಘ, ಅಡಿಕೆ ಬೆಳೆಗಾರರ ಮಾರಾಟ ಸಂಘ, ಮನೆಕಟ್ಟುವ ಸಹಕಾರ ಸಂಘ ಹೀಗೆ ಅನೇಕ ವಿಧದ ಸಹಕಾರ ಸಂಘಗಳಿವೆ. ಸ್ವಂತ ಪ್ರಯತ್ನದಿಂದ ಸಂಘಗಳನ್ನು ಸ್ಥಾಪಿಸಲು ಮುಂದೆ ಬರುವವರಿಗೆ ನಮ್ಮ ಸರ್ಕಾರ ಸಾಕಷ್ಟು ಮಾರ್ಗದರ್ಶನವನ್ನೂ ಪ್ರೋತ್ಸಾಹವನ್ನೂ ನೀಡುತ್ತಿದೆ.

ಗ್ರಾಮಾಂತರ ಸೇವಾ ಸಹಕಾರ ಸಂಘಗಳು : ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡಿಕೊಂಡಿದ್ದು ಬೇಸಾಯ ವೃತ್ತಿಯನ್ನು ಕೈಗೊಂಡಿರುವ 18 ವರ್ಷ ವಯಸ್ಸು ಪೂರ್ತಿಯಾದ ಎಲ್ಲರೂ ಈ ಸಂಘದ ಸದಸ್ಯರಾಗಲು ಅವಕಾಶವಿದೆ. ಈ ಸಂಘಗಳು ಬೇಸಾಯಕ್ಕೆ ಬೇಕಾದ ಬೀಜ ಗೊಬ್ಬರ ಕ್ರಿಮಿನಾಶಕಗಳಿಗೆ ವ್ಯವಸಾಯದ ಕೆಲಸದಲ್ಲಿ ನಿಯಮಿಸಿಕೊಂಡಿರುವ ಕೂಲಿಯವರಿಗೆ ವೇತನಕ್ಕೆ, ಇತರ ಖರ್ಚುಗಳಿಗೆ ಬೇಕಾದ ಹಣವನ್ನು ಆಯಾ ರೈತನ ವ್ಯವಸಾಯದ ಕಾರ್ಯಕ್ರಮಕ್ಕೆ ಅನುಗುಣವಾಗಿ ಸಾಲವಾಗಿ ಕೊಡುತ್ತವೆ. ಈ ತೆರನಾದ ಸಾಲದ ಮೇಲೆ ಕೊಡಬೇಕಾಗಿರುವ ಬಡ್ಡಿ ಖಾಸಗಿ ಸಾಲಕೊಡುವವರ ಬಡ್ಡಿಗೆ ಹೋಲಿಸಿದರೆ ಬಹು ಕಡಿಮೆ. ಖಾಸಗಿ ಸಾಲ ಕೊಡುವವರು ಸಾಮಾನ್ಯವಾಗಿ ಪ್ರತಿ ಹತ್ತು ರೂಪಾಯಿ ಅಸಲಿಗೆ ತಿಂಗಳಿಗೆ ಒಂದು ರೂಪಾಯಿನಂತೆ ಬಡ್ಡಿ ತೆಗೆದುಕೊಳ್ಳುತ್ತಿದ್ದರು. ಎಷ್ಟೋ ಪೇಳಿ ಅನೇಕ ರೈತರು ಕೊಡುತ್ತಿದ್ದ ಹಣವೆಲ್ಲಾ ಬರೀ ಬಡ್ಡಿಗೂ ಸರಿತೂಗುತ್ತಿರಲಿಲ್ಲ. ಹೀಗಾಗಿ ಅನೇಕ ರೈತರು ತಮ್ಮ ಆಸ್ತಿಯನ್ನು ಕಳೆದುಕೊಂಡು ಕಡುಬಡವರಾಗುವಂತಾಯಿತು. ಈ ತೊಂದರೆಯನ್ನು ನಿವಾರಿಸಲು ಸಹಕಾರ ಸಂಘಗಳು ಶೇ. 12ರಿಂದ 13ರೂ. ಬಡ್ಡಿದರದಲ್ಲಿ ಸದಸ್ಯರಿಗೆ ಸಾಲ ಕೊಡುತ್ತವೆ. ಅದೂ ಅಲ್ಲದೆ ವ್ಯವಸಾಯಕ್ಕೆ ಬೇಕಾದ ನೇಗಿಲುಗಳು, ಕಬ್ಬಿಣದ ಗುಳಗಳು, ಎತ್ತಿನಗಾಡಿ ಪಟ್ಟಿಗಳು ಮುಂತಾದ ಉಪಕರಣಗಳನ್ನೂ ಬೀಜ,

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನೂ ಬೇರೆ ಕಡೆಗಳಿಂದ ತರಿಸಿ ಸದಸ್ಯರಿಗೆ ಸಕಾಲದಲ್ಲಿ ನ್ಯಾಯ ಬೆಲೆಗೆ ಒದಗಿಸುವ ಏರ್ಪಾಡು ಮಾಡುತ್ತವೆ. ಈ ಸಂಘಗಳು ಈಗ ಹಾಲಿ ಪ್ರತಿ ಗ್ರಾಮ ಪಂಚಾಯ್ತಿಗೆ ಒಂದರಂತೆ ಸ್ಥಾಪಿತವಾಗಿವೆ. ಅನೇಕರು ಇನ್ನೂ ಸಂಘದ ಸದಸ್ಯರಾಗದೆ ಉಳಿದಿರುವುದರಿಂದ ಇದರ ಪ್ರಯೋಜನ ಎಲ್ಲರಿಗೂ ಸಿಕ್ಕುತ್ತಿಲ್ಲ. ಇದರಿಂದಾಗಿ ಕೆಲವಾರು ಸಂಘಗಳು ಬಲಯುತವಾಗಿ ಬೆಳೆಯಲು ಸಾಧ್ಯವಾಗಿಲ್ಲ. ಕೆಲವೆಡೆಗಳಲ್ಲಿ–ಪಟ್ಟಭದ್ರ ಹಿತಾಸಕ್ತಿಗಳಿಂದ ಸಂಘದ ಉಪಯೋಗ ಅನೇಕರಿಗೆ ತಿಳಿದಿಲ್ಲ.

ಸಂಘಗಳು ಸದೃಢವಾಗಲು ಸದಸ್ಯರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವಂತಾಗಲು ಅವುಗಳ ವ್ಯಾಪ್ತಿ ದೊಡ್ಡದಾಗಿರಬೇಕೆಂದೂ ಕನಿಷ್ಠ ಪಕ್ಷ ಪ್ರತಿ ಸಂಘದಲ್ಲೂ ಸಾಲದ ಬಟವಾಡೆ ಒಂದು ವರ್ಷಕ್ಕೆ ರೂ. 2 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಆಗಬೇಕೆಂದೂ ಪರಿಣಿತರು ಅಭಿಪ್ರಾಯ ಪಟ್ಟಿರುತ್ತಾರೆ. ಈ ಅಭಿಪ್ರಾಯದಂತೆ ರಾಜ್ಯದಲ್ಲಿ ಸಂಘಗಳ ಪುನರ್‌ಸಂಘಟನೆ ನಡೆಯುತ್ತಿದೆ. ಅಲ್ಲದೆ ಎಲ್ಲ ರೈತ ಯುವಕರೂ ಸದಸ್ಯರಾಗಲು ಅನುಕೂಲವಾಗುವಂತೆ ಸಹಕಾರ ಸಂಘಗಳ ಕಾನೂನನ್ನು ಇತ್ತೀಚೆಗೆ ಸರ್ಕಾರದವರು ಮಾರ್ಪಾಟು ಮಾಡಿರುತ್ತಾರೆ.

ಇದುವರೆಗೆ ಈ ತೆರನಾದ ಸಹಕಾರ ಸಂಘಗಳ ಮೂಲಕ ಸುಮಾರು 55 ಕೋಟಿ ರೂಪಾಯಿಗಳನ್ನು ಹತ್ತು ಲಕ್ಷಕ್ಕೂ ಹೆಚ್ಚು ರೈತರು ಸಾಲವಾಗಿ ಪಡೆದಿರುತ್ತಾರೆ. ಇದರಲ್ಲಿ ಶೇಕಡ 20 ರಿಂದ 25ರಷ್ಟು ಭಾಗ ರಾಸಾಯನಿಕ ಗೊಬ್ಬರದ ರೂಪದಲ್ಲಿ ಹಂಚಲ್ಪಟ್ಟಿದೆ.

ಸದಸ್ಯರು ಸುಗ್ಗಿಕಾಲದಲ್ಲಿ ಬಂದ ಉತ್ಪನ್ನವನ್ನು ಮಾರಿ ಈ ಸಾಲಗಳ ಮರುಪಾವತಿಯನ್ನು ಮಾಡಬಹುದು. ತಾವು ಬೆಳೆದ ವಸ್ತುಗಳಿಗೆ ಸರಿಯಾದ ಧಾರಣೆ ಇಲ್ಲದಿದ್ದ ಪಕ್ಷದಲ್ಲಿ ತಮ್ಮ ಫಸಲನ್ನು ಸಂಘದಲ್ಲಿ ಒತ್ತೆಯಿಟ್ಟು ಅದರ ಮೇಲೆ ಸಾಲಪಡೆದು ಮರುಪಾವತಿ ಮಾಡಬಹುದು. ಈ ರೀತಿ ಒತ್ತೆ ಇಟ್ಟ ವಸ್ತುವನ್ನು ಒಳ್ಳೆ ಬೆಲೆ ಬಂದ ಮೇಲೆ ಮಾರಿ ಹೆಚ್ಚಿಗೆ ಲಾಭಪಡೆಯಬಹುದು. ಈ ಸೌಕರ್ಯ ಬೇರೆ ಕಡೆ ದೊರೆಯಲಾರದು.

ಬೆಳೆ ಸಾಲಕೊಡುವುದರ ಜೊತೆಗೆ ಈ ಸಹಕಾರ ಸಂಘಗಳು ದನಕರುಗಳನ್ನು ಕೊಳ್ಳಲು, ಕೋಳಿ, ಕುರಿ, ಹಂದಿ ಮೊದಲಾದುವುಗಳನ್ನು ಸಾಕಲು

Sri Vidyabharathi Book Centre, Sringeri

CC-O. In Public Domain. Digitized by eGangotri



ಸಚಿವರ ಸಂಪುಟದ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹ ಸಾಲಗಳನ್ನು ಒದಗಿಸುತ್ತವೆ. ಈ ಸಾಲಗಳನ್ನು ಮೂರು ಅಥವಾ ಐದು ವರ್ಷಗಳಲ್ಲಿ ವರ್ಷಕ್ಕೆ ಒಂದು ಕಂತಿನಂತೆ ಮರುಪಾವತಿ ಮಾಡಬಹುದು. ಇಂತಹ ಸಾಲಗಳನ್ನು ಮಧ್ಯಮಾವಧಿ ಸಾಲ ಎಂದು ಕರೆಯುತ್ತಾರೆ. ಈ ಸಹಕಾರ ಸಂಘಗಳು 1974–75ನೆಯ ಸಾಲಿಗೆ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಹಣವನ್ನು ಸಾಲದ ರೂಪದಲ್ಲಿ ಒದಗಿಸಿದ್ದುವು.

ಈ ಸಹಕಾರ ಸಂಘಗಳಿಂದ ಮತ್ತೊಂದು ಅನುಕೂಲವೂ ಇದೆ. ಅದೇನೆಂದರೆ ಮಳೆ ಅಭಾವ ಮತ್ತು ಪ್ರವಾಹ ಮುಂತಾದ ಪ್ರಕೃತಿ ವಿಕೋಪದಿಂದ ಬೆಳೆಗಳು ಒಂದು ಪ್ರದೇಶದಲ್ಲಿ ನಾಶವಾಗಿದ್ದರೆ ಅಂತಹ ಸಂದರ್ಭದಲ್ಲಿ ಸಂಘದ ಸದಸ್ಯರು ತಾವು ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡಲು ತೊಂದರೆಯಾಗುತ್ತದೆ. ಆಗ ಸಹಕಾರ ಸಂಘಗಳು ಸಾಲದ ವಸೂಲಾತಿಯನ್ನು ಮುಂದಕ್ಕೆ ಹಾಕಿ ಸಾಲವನ್ನು ಮೂರು ವಾರ್ಷಿಕ ಕಂತುಗಳಲ್ಲಿ ವಸೂಲು ಮಾಡುವುದಲ್ಲದೆ, ಮತ್ತೆ ಬೆಳೆಗಳನ್ನು ಬೆಳೆಯಲು ಬೇಕಾದ ಸಹಾಯವನ್ನು ಮಾಡುತ್ತವೆ. ಹಿಂದಿನ ವರ್ಷಗಳಲ್ಲಿ ಈ ರೀತಿ ಸಹಾಯವಾಗಿ ಕೊಟ್ಟಿರುವ ಮೊತ್ತ ರೂಪಾಯಿ 6 ಕೋಟಿಗೂ ಮೀರಿರುತ್ತದೆ.

ಈ ತರಹದ ಸೌಲಭ್ಯಗಳನ್ನು ನೋಡಿದಲ್ಲಿ ಗ್ರಾಮಾಂತರ ಸಹಕಾರ ಸಂಘಗಳು ರೈತರ ಕಲ್ಯಾಣಕ್ಕಾಗಿ ಸ್ಥಾಪಿಸಲ್ಪಟ್ಟಿವೆ ಎಂಬುದು ತಿಳಿದುಬರುತ್ತದೆ.

ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳು : ಇವೂ ಸಹ ಸಹಕಾರ ಸಂಘಗಳು. ರೈತರು ತಮ್ಮ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾದರೆ ಈ ಸಂಘದಲ್ಲಿ ಸದಸ್ಯರಾಗಿ, ಅವರಿಗೆ ಬೇಕಾದ ಹಣವನ್ನು ಸಾಲವಾಗಿ ಪಡೆಯಬಹುದು. ಈ ಸಂಘಗಳು ನೀರಾವರಿ ಬಾವಿಗಳನ್ನು ತೋಡಲು, ನೀರೆತ್ತುವ ಯಂತ್ರಗಳನ್ನು ಕೊಳ್ಳಲು, ಟ್ರ್ಯಾಕ್ಟರುಗಳನ್ನು ಕೊಳ್ಳಲು ಅಥವಾ ಯಾಂತ್ರಿಕ ನೇಗಿಲುಗಳನ್ನು ಕೊಳ್ಳಲು ಜಮೀನು ಆಬಾದುಮಾಡಲು, ಅಡಕೆ, ಕಾಫಿ, ಕೆತ್ತಳೆ, ದ್ರಾಕ್ಷಿ, ಮಾವು, ಸೀಬೆ, ಅನಾನಸ್ ಬೆಳೆಯಲು ಬೇಕಾಗುವ ಹಣವನ್ನು ಸಾಲದ ರೂಪದಲ್ಲಿ ಕೊಟ್ಟು ಸುಲಭ ವಾರ್ಷಿಕ ಕಂತುಗಳಲ್ಲಿ ವಾಪಸ್ಸು ಪಡೆಯುತ್ತವೆ. ಈ ರೀತಿಯಾದ ಸಾಲವನ್ನು 8 ವರ್ಷಗಳಿಂದ ಹದಿನೈದು ವರ್ಷಗಳಲ್ಲಿ ಮರುಪಾವತಿ ಮಾಡಬೇಕಾಗುತ್ತದೆ. ಸಾಲದ ಮೇಲಿನ ಬಡ್ಡಿ ದರವೂ ಸಹ ಶೇ.10ರಿಂದ 11 ರೂಪಾಯಿಗಳಷ್ಟು ಕಡಿಮೆಯಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಹಕಾರ ಸಂಘಗಳು ಭೂ ಅಭಿವೃದ್ಧಿಗಾಗಿ ಒಂದು ನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಸಾಲದ ರೂಪದಲ್ಲಿ ಹಂಚಿರುತ್ತವೆ. ಈ ಸಹಾಯದಿಂದ ಸಾವಿರಾರು ಜನ ಸದಸ್ಯರು ಸುಮಾರು ಎರಡು ಲಕ್ಷ ಎಕರೆ ಜಮೀನನ್ನು ನೀರಾವರಿ ಬೇಸಾಯಕ್ಕೆ ಒಳಪಡಿಸಿರುತ್ತಾರೆ. ಸುಮಾರು ಐದು ಲಕ್ಷ ಎಕರೆ ಜಮೀನನ್ನು ಆಬಾದು ಮಾಡಲಾಗಿದೆ. ಸಾವಿರಾರು ಎಕರೆಗಳಲ್ಲಿ ತೆಂಗು, ಅಡಕೆ, ದ್ರಾಕ್ಷಿ ಮೊದಲಾದ ಬೆಳೆಗಳನ್ನು ಬೆಳೆಸಲಾಗಿದೆ. ಸಾಲದ ಸೌಲಭ್ಯವನ್ನು ಪಡೆದ ಅನೇಕ ಸದಸ್ಯರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಹಾಯವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣ ಹಿಡುವಳಿ ಮತ್ತು ಅತಿಸಣ್ಣ ಹಿಡುವಳಿದಾರರ ಅಭಿವೃದ್ಧಿ ಸಂಸ್ಥೆಗಳು

ನಮ್ಮ ದೇಶದಲ್ಲಿ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರೇ ಅತಿ ಹೆಚ್ಚಾಗಿರುತ್ತಾರೆ. ಅನೇಕರಿಗೆ ವಾರ್ಷಿಕ ವರಮಾನ ರೂಪಾಯಿ 2,400ಕ್ಕೂ ಕಡಿಮೆ ಇದೆ. ಇಷ್ಟು ಅಲ್ಪ ವರಮಾನವಿರುವುದರಿಂದ ಅವರು ಅತಿ ಬಡವರಾಗಿ ಜೀವನ ಸಾಗಿಸಲು ಬಹಳ ಕಷ್ಟ ಪಡುತ್ತಿದ್ದಾರೆ. ಈಗ ಇರುವ ಸಹಕಾರ ಸಂಘಗಳಿಂದ ಮತ್ತು ಇತರ ಹಣ ಒದಗಿಸುವ ಸಂಸ್ಥೆಗಳಿಂದ ಈ ವರ್ಗದ ಜನರಿಗೆ ಸಾಕಷ್ಟು ಸೌಲಭ್ಯ ಒದಗುತ್ತಿರಲಿಲ್ಲ. ಆದುದರಿಂದ ಈ ಒಂದು ಪಂಗಡಕ್ಕೆ ಸೇರಿದ ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಅಗತ್ಯವಾದ ಕಾರ್ಯ ಕ್ರಮಗಳನ್ನು ಅಧ್ಯಯನಮಾಡಿ ಸಲಹೆಕೊಡಲು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಆಗಿದ್ದ ವೆಂಕಟಪ್ಪಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಿಸರ್ವ್ ಬ್ಯಾಂಕ್ ನೇಮಿಸಿತು. ರಿಸರ್ವ್ ಬ್ಯಾಂಕ್ ನಮ್ಮ ದೇಶದ ಎಲ್ಲ ಹಣಕಾಸಿನ ವ್ಯವಹಾರಗಳ ಬಗ್ಗೆ ಮೇಲ್ವಿಚಾರಣೆ ನಡೆಸುವ ಒಂದು ಉನ್ನತ ಮಟ್ಟದ ಸಂಸ್ಥೆ. ಈ ಸಂಸ್ಥೆಯು ನೇಮಿಸಿದ್ದ ಈ ಸಮಿತಿಯು ದೇಶದ ಎಲ್ಲ ಭಾಗಗಳಿಗೂ ಭೇಟಿಕೊಟ್ಟು, ಕೂಲಂಕಷವಾಗಿ ಅಧ್ಯಯನ ನಡೆಸಿ ಅನೇಕ ಸಲಹೆಗಳನ್ನು ಕೊಟ್ಟಿತು. ಅವು ಈ ರೀತಿ ಇವೆ:

ಅ. ಸಣ್ಣ ಮತ್ತು ಅತಿ ಸಣ್ಣ ರೈತರ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಲು ಒಂದು ಪ್ರತ್ಯೇಕ ಸಂಸ್ಥೆಯನ್ನು ರಚಿಸಬೇಕು.

ಆ. ಆ ಸಂಸ್ಥೆಯ ಆಡಳಿತವನ್ನು ನೋಡಿಕೊಳ್ಳುವುದರಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸಬೇಕು.

Sri Vidyabharathi Book Centre, Sringeri

CC-0. In Public Domain. Digitized by eGangotri

೫. ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ಆರ್ಥಿಕವಾಗಿ ಬಹಳ ಹಿಂದುಳಿದವರಾದ್ದರಿಂದ ಅವರಿಗೆ ಬೇಕಾದ ಸಾಲ ಸಾಮಗ್ರಿಗಳನ್ನು ಒದಗಿಸುವಾಗ ಸ್ವಲ್ಪಭಾಗ ಎಂದರೆ ರೂಪಾಯಿಯಲ್ಲಿ 25 ಪೈಸೆಯಿಂದ ಹಿಡಿದು 33 ಪೈಸೆಯವರೆಗೆ ಸಹಾಯಧನ (Subsidy) ಕೊಡಬೇಕು.

೬. ಈ ಜನರು ಸಹಕಾರ ಸಂಘಗಳ ಸದಸ್ಯರಾಗಬೇಕು.

೭. ಅಗತ್ಯ ಕಂಡಲ್ಲಿ ಅದಕ್ಕೆ ಬೇಕಾದ ಕನಿಷ್ಠಮೂಲ ಬಂಡವಾಳವನ್ನು ಸಹ ಈ ಸಂಸ್ಥೆಯವರೇ ತಮ್ಮ ಹಣದಿಂದ ಸಾಲದ ರೂಪದಲ್ಲಿ ಒದಗಿಸಬೇಕು.

ಈ ಶಿಫಾರ್ಸುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಂಗೀಕರಿಸಿದವು. ಆದರಂತೆ ನಮ್ಮ ರಾಜ್ಯದಲ್ಲಿ ಮೊದಲನೆಯದಾಗಿ ಏಳು ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು, ಮೈಸೂರು, ದಕ್ಷಿಣ ಕನ್ನಡ, ಬಿದರೆ, ಬಿಜಾಪುರ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಿಶೇಷ ಸಂಸ್ಥೆಗಳನ್ನು ಆಯಾ ವಿಭಾಗದ ಕಮೀಷನರುಗಳ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಗಳು ಆಯಾ ಜಿಲ್ಲೆಯಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರನ್ನು ಗುರುತಿಸಿ ಅವರುಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ತಾಂತ್ರಿಕ ಜ್ಞಾನವನ್ನು ತಮ್ಮಲ್ಲಿರುವ ಪರಿಣತರ ಮುಖಾಂತರ ಒದಗಿಸುವುದಲ್ಲದೆ ಅವರಿಗೆ ಬೇಕಾಗಿರುವ ಹಣದ ಅವಶ್ಯಕತೆಯನ್ನು ಸಹಕಾರ ಸಂಘಗಳ ಮುಖಾಂತರ ಒದಗಿಸಲು ನೆರವಾಗುತ್ತವೆ. ಅಲ್ಲದೆ ಈ ರೀತಿ ಆ ರೈತರಿಗೆ ಬೇಕಾದ ಧನ ಸಹಾಯವನ್ನು ಸಹ ಒದಗಿಸುತ್ತಿವೆ. ಈ ಸಂಸ್ಥೆಗಳಿಂದ 1975ರ ಆಖೈರಿಗೆ 5.45 ಲಕ್ಷ ರೈತರನ್ನು ಗುರುತಿಸಿ ಅವರಲ್ಲಿ 2,50,000 ರೈತರನ್ನು ಸಹಕಾರ ಸಂಘಗಳ ಸದಸ್ಯರನ್ನಾಗಿ ಸೇರಿಸಿ, 14 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಒದಗಿಸಲಾಗಿದೆ. ಈ ಕಾರ್ಯಕ್ರಮದಿಂದ ಬಹಳಷ್ಟು ಸಣ್ಣ ರೈತರಿಗೆ ಸಹಾಯವಾಗಿದೆ. ಇದರ ಉಪಯುಕ್ತತೆಯನ್ನು ಅರಿತು 1975ರಲ್ಲಿ ಈ ಯೋಜನೆಯನ್ನು ಬಳ್ಳಾರಿ ಮತ್ತು ಹಾಸನ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಇದರಂತೆ ಇನ್ನು ಉಳಿದ ಜಿಲ್ಲೆಗಳಿಗೂ ವಿಸ್ತರಿಸಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಗಾಲ ಪೀಡಿತ ಪ್ರದೇಶಗಳ ಅಭಿವೃದ್ಧಿ

ನಮ್ಮ ರಾಜ್ಯದಲ್ಲಿ ಅನೇಕ ಭಾಗಗಳು–ಬಿಜಾಪುರ, ಚಿತ್ರದುರ್ಗ, ಕೋಲಾರ, ತುಮಕೂರು, ಬಳ್ಳಾರಿ, ಧಾರವಾಡ ಜಿಲ್ಲೆಯ ಕೆಲವು ತಾಲ್ಲೂಕುಗಳು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ನೀರಾವರಿಯ ಅಭಾವದಿಂದ ಪ್ರಕೃತಿಯ ವಿಕೋಪಕ್ಕೆ ಆಗಾಗ ಒಳಗಾಗುತ್ತಿರುತ್ತವೆ. ಹೀಗಾಗಿ ಅಲ್ಲಿನ ರೈತರು ಪದೇಪದೇ ಬಹಳ ತೊಂದರೆಗೆ ಈಡಾಗುತ್ತಿದ್ದಾರೆ. ಈ ರೈತರ ಏಳಿಗೆಗಾಗಿ ಭಾರತ ಸರ್ಕಾರ ರಾಜ್ಯ ಸರ್ಕಾರದ ಕೆಲವೊಂದು ಯೋಜನೆಗಳಿಗೆ ಹಣ ಸಹಾಯವನ್ನು ಒದಗಿಸುತ್ತದೆ. ಅವುಗಳಲ್ಲಿ ಮುಖ್ಯವಾದುವೆಂದರೆ ಮಳೆಗಾಲದಲ್ಲಿ ಬರುವ ಮಳೆಯಿಂದಾಗಿ ಒದಗುವ ನೀರಿನ ಶೇಖರಣೆಗೆ ಕೊಳಗಳನ್ನು ನಿರ್ಮಿಸುವುದು; ಭೂಮಿಯ ಒಳಗಿನ ನೀರಿನ ಪರಿಮಿತಿಯನ್ನು ವೈಜ್ಞಾನಿಕವಾಗಿ ನಿರ್ಧರಿಸಿ, ನೀರಾವರಿ ಬಾವಿಗಳನ್ನು ತೋಡಲು ನೆರವು ಮತ್ತು ಹಣ ಸಹಾಯ ಒದಗಿಸುವುದು; ಭೂಮಿಯಲ್ಲಿ ಜಲದ ಅಂಶ ಹೆಚ್ಚು ಕಾಲ ಇರುವಂತೆ ಭೂಸಾರ ಸಂರಕ್ಷಣೆ ಕಾರ್ಯ ಎಂದರೆ, ಕಟ್ಟೆ ಅಥವಾ ಬದುಗಳನ್ನು ನಿರ್ಮಿಸುವುದು; ಹೆಚ್ಚಿಗೆ ಮಳೆಯನ್ನು ಆಕರ್ಷಿಸಲು ಸಸ್ಯಸಂಪತ್ತನ್ನು ಹೆಚ್ಚಿಸುವುದು; ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರನ್ನು ಗುರುತಿಸಿ ಅವರಿಗೆ ಅವಶ್ಯಕವಾಗಿ ಬೇಕಾದ ಹಣವನ್ನು ಸಹಕಾರ ಸಂಘಗಳ ಮುಖಾಂತರ ಒದಗಿಸುವುದೇ ಮೊದಲಾದ ಕಾರ್ಯಗಳನ್ನು ಕೈಗೊಳ್ಳಲು ಯೋಜನೆಗಳನ್ನು ತಯಾರಿಸಿರುತ್ತಾರೆ. ಈ ಯೋಜನೆಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತಮಾಡಲು ವಿಶೇಷ ಸಂಸ್ಥೆಗಳನ್ನು ಆಯಾಯ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.

ಇದರಂತೆಯೇ ಇತರ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಸಣ್ಣ ಹಿಡುವಳಿದಾರರಿಗೆ ಸಹಾಯ ಒದಗಿಸುವ ಉದ್ದೇಶದಿಂದ ಆಯಾ ಜಿಲ್ಲೆಗಳಲ್ಲಿ ಕೆಲಸಮಾಡುತ್ತಿರುವ ಗ್ರಾಮೀಣ ಸಹಕಾರ ಸಂಘಗಳು ಕೊಡುತ್ತಿರುವ ಸಾಲದಲ್ಲಿ ಕನಿಷ್ಠಪಕ್ಷ ಶೇಕಡ 20ರಷ್ಟನ್ನಾದರೂ ಈ ತೆರನಾದ ರೈತರಿಗೆ ಸಾಲಕೊಡಬೇಕೆಂದು ಕಡ್ಡಾಯಪಡಿಸಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರೈತಸೇವಾ ಸಹಕಾರ ಸಂಘ

ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಅನೇಕ ಸಂಘಗಳು ನಾನಾ ಕಾರಣಗಳಿಂದ ಮುಚ್ಚಿಹೋಗಿವೆ ಇಲ್ಲವೇ ದುರ್ಬಲವಾಗಿವೆ. ಈ ಪರಿಸ್ಥಿತಿಯಲ್ಲಿ ಅಲ್ಲಿನ ಜನಗಳಿಗೆ ಬೇಕಾಗುವ ಸಾಲ ಸೌಲಭ್ಯಗಳನ್ನು ಒದಗಿಸುವ ಸಂಸ್ಥೆಯೇ ಇಲ್ಲವಾಗಿದೆ. ಇದ್ದರೂ ಅವುಗಳ ಅದಕ್ಷತೆಯ ನಡವಳಿಕೆಯಿಂದ ಜನಗಳಿಗೆ ಏನೂ ಸಹಾಯ ಸಿಕ್ಕುತ್ತಿಲ್ಲ. ಇದೂ ಅಲ್ಲದೆ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರ ಅವಶ್ಯಕತೆಗಳನ್ನು ಯೋಚಿಸಿದರೆ ಈಗ ಒದಗುತ್ತಿರುವ ಸಾಲ ಮತ್ತು ಸೌಲಭ್ಯಗಳು ತೀರ ಕಡಿಮೆ. ಈ ಕೊರತೆಯನ್ನು ಸಾಧ್ಯವಾದಷ್ಟು ನೀಗಿಸಲು ಅಂತಹ ಸ್ಥಳಗಳಲ್ಲಿ ಒಂದು ರೈತರ ಸೇವಾ ಸಹಕಾರ ಸಂಘವನ್ನು ಸ್ಥಾಪಿಸಬೇಕೆಂದು ಭಾರತ ಸರ್ಕಾರದ ಕೃಷಿ ಆಯೋಗವು ಸಲಹೆಮಾಡಿತು. ಈ ಸಲಹೆಯಂತೆ 10,000 ಜನಸಂಖ್ಯೆಯುಳ್ಳ ಗ್ರಾಮಾಂತರ ಪ್ರದೇಶದಲ್ಲಿ ಈಗಿರುವ ಸಹಕಾರ ಸಂಘಗಳಿಂದ ಹೆಚ್ಚಿನ ಸೌಕರ್ಯ ಮತ್ತು ನೆರವು ಸಿಕ್ಕುತ್ತಿಲ್ಲದಿದ್ದರೆ ಈ ರೀತಿ ಸಂಘಗಳನ್ನು ಸ್ಥಾಪಿಸಬಹುದು ಎಂದು ನಿರ್ಧರಿಸಲಾಗಿದೆ. ಈ ಸಂಘಗಳ ಆಡಳಿತ ವ್ಯಾಪ್ತಿಯಲ್ಲಿ 5ರಿಂದ 6ಮೈಲಿ ವಿಸ್ತೀರ್ಣದಲ್ಲಿರುವ ಬಹುತೇಕ ಸಣ್ಣ ರೈತರೇ ಈ ಸಂಘಗಳ ಸದಸ್ಯರು. ಆಡಳಿತ ಸಮಿತಿಯಲ್ಲಿ ಸಣ್ಣ ರೈತರಿಗೆ ಹೆಚ್ಚಿನ ಸ್ಥಾನವಿರುವುದರ ಜೊತೆಗೆ ಸಣ್ಣ ರೈತರಲ್ಲೇ ಒಬ್ಬರು ಅಧ್ಯಕ್ಷರಾಗಿರುತ್ತಾರೆ. ಇದರಿಂದ ಸಣ್ಣ ರೈತರ ಅವಶ್ಯಕತೆಗಳಿಗೆ ಹೆಚ್ಚಿನ ಗಮನ ಕೊಡಲು ಅವಕಾಶವಾಗುತ್ತದೆ. ಸಹಕಾರ ಸಂಘಗಳ ವ್ಯವಹಾರದಲ್ಲಿ ನುರಿತ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರು ಎಂದರೆ ಆಡಳಿತ ನಡೆಸುವ ಉನ್ನತ ಅಧಿಕಾರಿಯ ಜೊತೆಗೆ ರೈತರಿಗೆ ಬೇಕಾಗುವ ತಾಂತ್ರಿಕ ಸಲಹೆಯನ್ನು ನೀಡಲು ವ್ಯವಸಾಯ ವಿಸ್ತರಣಾಧಿಕಾರಿಗಳು ಮತ್ತು ಗ್ರಾಮ ಸೇವಕರು ಇರುತ್ತಾರೆ. ಈ ಸಂಘ ಸಾಲದ ರೂಪದಲ್ಲಿ ಹಣವನ್ನು ಒದಗಿಸುವುದರ ಜೊತೆಗೆ ವ್ಯವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಯಕ್ಕೆ ಬೇಕಾಗುವ ಇತರ ಉಪಕರಣಗಳು ಬೀಜ ಗೊಬ್ಬರ ವಗೈರೆ ಒದಗಿಸುವುದಲ್ಲದೆ ರೈತರು ಬೆಳೆದ ಬೆಳೆಗಳ ಶೇಖರಣೆ ಮತ್ತು ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತದೆ. ನಮ್ಮ ರಾಜ್ಯದಲ್ಲಿ ಇದುವರೆವಿಗೆ 32 ರೈತ ಸೇವಾಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಇವೆಲ್ಲವೂ ರೈತರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸತೊಡಗಿವೆ.

ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳು: ವಾಣಿಜ್ಯ ಬ್ಯಾಂಕುಗಳು ಮೊದಲಿಗೆ ಕೆಲವೊಂದು ಬಂಡವಾಳಸ್ಥರು ಮತ್ತು ಸಮಾಜದಲ್ಲಿನ ಗಣ್ಯ ವ್ಯಕ್ತಿಗಳಿಂದ ದೊಡ್ಡ ಪಟ್ಟಣಗಳಲ್ಲಿ ಸ್ಥಾಪಿತವಾದವು. ಇವುಗಳ ಮುಖ್ಯ ಉದ್ದೇಶ ಸಾರ್ವಜನಿಕರಿಂದ ಹೆಚ್ಚಿನ ಹಣವನ್ನು ಡಿಪಾಜಿಟ್ (ಠೇವಣಿ) ಮುಖಾಂತರ ಪಡೆದು ಕೆಲವು ಉದ್ದಿಮೆ, ಕೈಗಾರಿಕೆಗಳನ್ನು ನಡೆಸುತ್ತಿರುವವರಿಗೆ ಮತ್ತು ವ್ಯಾಪಾರಿಗಳಿಗೆ ಬಡ್ಡಿಯ ಮೇಲೆ ಬಂಡವಾಳವನ್ನು ಸಾಲದ ರೂಪದಲ್ಲಿ ಹಂಚುವುದಾಗಿತ್ತು. ಈ ತೆರನಾದ ಸಂಘಗಳು ಕೇವಲ ಪಟ್ಟಣಗಳಿಗೆ ಹೆಚ್ಚು ಸೀಮಿತವಾಗಿ ಕೇವಲ ಅನುಕೂಲಸ್ಥರಿಗೆ ಸಹಾಯ ಮಾಡುತ್ತಿದ್ದವು. ಈ ಸಂಸ್ಥೆಗಳು ಬಡವರಿಗೆ ಮತ್ತು ರೈತರಿಗೆ ಹಳ್ಳಿಗಾಡಿನಲ್ಲಿ ಅಷ್ಟಾಗಿ ಸಹಾಯ ಮಾಡುತ್ತಿರಲಿಲ್ಲ. ನಮ್ಮ ದೇಶದಲ್ಲಿ ಹೆಚ್ಚಾಗಿ ಬಡ ಜನರೇ ಇರುವುದರಿಂದ ಅವರ ಅವಶ್ಯಕತೆಗಳನ್ನು ಪೂರೈಸಲು ಕೇವಲ ಸಹಕಾರ ಸಂಘಗಳು ಮತ್ತು ಸರ್ಕಾರದಿಂದ ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ಭಾರತ ಸರ್ಕಾರವರು 1969ರಲ್ಲಿ ಹದಿನಾಲ್ಕು ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು. ಈ ರೀತಿ ಮಾಡಿದುದರ ಫಲವಾಗಿ ಬ್ಯಾಂಕುಗಳಲ್ಲಿದ್ದ ಹೆಚ್ಚಿನ ಮೊಬಲಗನ್ನು ಬಡಜನರ ಮತ್ತು ದೇಶದ ಅಭಿವೃದ್ಧಿಕಾರ್ಯಗಳಿಗೆ ಉಪಯೋಗಿಸುವ ಅವಕಾಶ ಕಲ್ಪಿಸಿಕೊಟ್ಟಂತಾಯಿತು. ಬ್ಯಾಂಕುಗಳು ಬಡವರಿಗೆ ಹೇಗೆ ಸಹಾಯ ಮಾಡುತ್ತವೆ ಎಂದು ತಿಳಿಯಲು ಆಸಕ್ತರಾಗಿರುವುದು ಸಹಜ. ಬ್ಯಾಂಕುಗಳು ಸಾಮಾನ್ಯ ಜನರ ಆರ್ಥಿಕ ಬೆಳವಣಿಗೆಗೆ ಧನಸಹಾಯ ಮಾಡಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ, ಉದ್ಯೋಗದಲ್ಲಿ ತೊಡಗಿರುವವರಿಗೆ ಬೇಕಾಗುವ ಹಣವನ್ನು ಸಾಲದರೂಪದಲ್ಲಿ ಒದಗಿಸಿ ಅವರಿಂದ ಸುಲಭ ಕಂತುಗಳಲ್ಲಿ ವಸೂಲು ಮಾಡುತ್ತವೆ. ಕೆಲವೊಂದು ಸಹಕಾರ ಸಂಘಗಳ ಮುಖಾಂತರವೂ ಈ ರೀತಿಯ ಸೌಲಭ್ಯವನ್ನು ಒದಗಿಸುತ್ತವೆ. ನಮ್ಮ ರಾಜ್ಯದಲ್ಲಿ ಏಳು ನೂರಕ್ಕೂ ಮೀರಿ ಸಹಕಾರ ಸಂಘಗಳು ಸುಮಾರು ಐದು ಕೋಟಿ ರೂಪಾಯಿಗಳಿಗೆ ಮೀರಿದ ಹಣವನ್ನು ಸದಸ್ಯರಿಗೆ ಸಾಲದ ರೂಪದಲ್ಲಿ ಸದರಿ ಬ್ಯಾಂಕುಗಳ ನೆರವಿನಿಂದ ವಿತರಣೆ ಮಾಡಿವೆ.

CC-O. In Public Domain. Digitized by eGangotri

ಬೇಸಾಯ ಸಹಕಾರ ಸಂಘಗಳು

ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರು ಈ ರೀತಿಯ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಆರ್ಥಿಕವಾಗಿ ಮುಂದುವರಿಯಲು ಅವಕಾಶವಿದೆ. ತಮ್ಮಲ್ಲಿರುವ ಜ್ಞಾನ ಮತ್ತು ಸಲಕರಣೆಗಳನ್ನೂ ಕೂಡಿಸಿಕೊಳ್ಳುವುದರ ಜೊತೆಗೆ ಜಮೀನನ್ನು ಅಭಿವೃದ್ಧಿಪಡಿಸಿ ಹೆಚ್ಚಿನ ಉತ್ಪನ್ನವನ್ನು ಪಡೆಯಲು ನೀರಾವರಿ ಬಾವಿ, ಪಂಪು, ಉಗ್ರಾಣ, ಉತ್ತಮವಾದ ಬೀಜ, ರಾಸಾಯನಿಕ ಗೊಬ್ಬರ ಎಲ್ಲವನ್ನು ಸಾಲದರೂಪದಲ್ಲಿ ಪಡೆದು ಸಾಮೂಹಿಕವಾಗಿ ಜಮೀನಿನಲ್ಲಿ ದುಡಿದು ಬಂದ ಉತ್ಪನ್ನವನ್ನು ಹಂಚಿಕೊಳ್ಳಬಹುದು. ಈಗ ನಮ್ಮ ರಾಜ್ಯದಲ್ಲಿ ಐದು ನೂರಕ್ಕೂ ಮೀರಿ ಇಂತಹ ಸಂಘಗಳು ಸ್ಥಾಪಿತವಾಗಿವೆ. ಇವುಗಳಲ್ಲಿ ಸುಮಾರು ಅರ್ಧದಷ್ಟು ಚೆನ್ನಾಗಿ ಕೆಲಸಮಾಡುತ್ತಿವೆ. ಈ ಸಂಸ್ಥೆಗಳಿಗೆ ಸರ್ಕಾರವು ಸಾಕಷ್ಟು ಪ್ರೋತ್ಸಾಹ ಕೊಡುತ್ತಿರುವುದರಿಂದ ನಮ್ಮ ರೈತರು ಈ ತೆರನಾದ ಸಂಘವನ್ನು ಸ್ಥಾಪಿಸಿಕೊಂಡು ಅನುಕೂಲಪಡೆಯುವುದು ಒಳ್ಳೆಯದು.

ಇದುವರೆವಿಗೂ ಜಮೀನಿನ ಉತ್ಪಾದನೆಯನ್ನು ಹೆಚ್ಚಿಸಲು ಏನೇನು ಅವಕಾಶಗಳಿವೆ ಎಂಬುದನ್ನು ತಿಳಿದಿರಲ್ಲವೆ. ಇನ್ನು ಈ ಉತ್ಪಾದನೆಯನ್ನು ಮಾರಾಟಮಾಡಲು ಇರುವ ಅವಕಾಶಗಳೇನು ಮತ್ತು ಅದರಿಂದ ರೈತನಿಗೆ ಹೇಗೆ ಪ್ರಯೋಜನವಾಗುವುದು ಎಂಬುದನ್ನು ತಿಳಿಯೋಣ.

ರೈತರು ಸಾಮಾನ್ಯವಾಗಿ ತಾವು ಬೆಳೆದ ಬೆಳೆಯನ್ನು ವರ್ತಕರಿಗೋ ಅಥವಾ ತಮಗೆ ಸಾಲದ ನೆರವನ್ನು ನೀಡಿದ ಖಾಸಗಿಯವರಿಗೋ ಅವರು ನಿರ್ಧರಿಸುವ ಬೆಲೆಗೆ ಮಾರುವುದು ಈಗಲೂ ಅನೇಕ ಕಡೆ ಇರುವ ವಾಡಿಕೆ. ಈ ರೀತಿ ಮಾರುವುದರಿಂದ ಅವರು ಬೆಳೆದ ಬೆಳೆಗೆ ಸರಿಯಾದ ಆದಾಯ ಬರುವುದಿಲ್ಲ; ಅಲ್ಲದೆ ತೂಕ ಮತ್ತು ಅಳತೆಯಲ್ಲೂ ಅವರಿಗೆ ನಷ್ಟ. ಸಾಮಾನ್ಯವಾಗಿ ಈ ತೆರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೆಣಸಂಜೆಯ ಸಮಯದಲ್ಲಿ ಗೋಪಾಲಕರು

Sri Vidyabharathi Book Centre, Sringeri

CC-O. In Public Domain. Digitized by eGangotri



ಸಜ್ಜನರಿಂದ ಅಧಿಕ ಪೂಜೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾದ ವ್ಯವಹಾರದಲ್ಲಿ ತಾವು ಮಾರಬೇಕೆಂದಿರುವ ದಿನಸಿಯಲ್ಲಿ ಸ್ವಲ್ಪಭಾಗ ಧರ್ಮಕ್ಕೆ ಮತ್ತು ಇಳುವರಿ ಬಗ್ಗೆ ಮೊದಲಾಗಿ ಸಬೂಬು ಹೇಳಿ ಹೆಚ್ಚಿಗೆ ಪಡೆದು ಕಡಿಮೆ ಹಣವನ್ನು ಕೊಡುತ್ತಿದ್ದರು. ಈ ಪದ್ಧತಿಯನ್ನು ತಪ್ಪಿಸಲು ಮಾರಾಟ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಇವುಗಳ ಉದ್ದೇಶ ಮತ್ತು ಅನುಕೂಲತೆಯನ್ನು ಸ್ಥೂಲವಾಗಿ ತಿಳಿಯೋಣ.

ಮಾರಾಟ ಸಹಕಾರ ಸಂಘಗಳು: ಈ ಸಂಘಗಳನ್ನು ಅವುಗಳು ಕೈಗೊಳ್ಳುವ ಕಾರ್ಯದ ಮೇಲೆ ವಿಂಗಡಿಸಲಾಗಿದೆ. ಪದಾರ್ಥಗಳ ಮಾರಾಟಕ್ಕೆ ವ್ಯವಸ್ಥೆ ಮಾಡಿ ರೈತರಿಗೆ ಅನುಕೂಲ ಕಲ್ಪಿಸಲು ಪ್ರತಿ ತಾಲ್ಲೂಕಿಗೂ ಒಂದರಂತೆ ಮಾರಾಟ ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ. ಈ ಮಾರಾಟ ಸಂಘಗಳು ರೈತರಿಗೆ ವ್ಯವಸಾಯಕ್ಕೆ ಬೇಕಾದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷಧಿಗಳು ಉತ್ತಮ ಬೀಜ ಮೊದಲಾದುವುಗಳನ್ನು ಒದಗಿಸುವುದರ ಜೊತೆಗೆ ರೈತರು ಬೆಳೆದ ಬೆಳೆಗೆ ಉತ್ತಮ ದರ ದೊರೆಯುವಂತೆ ಸಹಾಯ ಮಾಡುತ್ತವೆ. ಉತ್ತಮ ದರ ಅಥವಾ ಯೋಗ್ಯ ಬೆಲೆ ದೊರೆಯಬೇಕಾದರೆ ಸುಗ್ಗಿ ಕಾಲದಲ್ಲಿ ಬೆಲೆಗಳು ಕಡಿಮೆ ಇದ್ದರೆ ಸ್ವಲ್ಪಕಾಲ ತಡೆದು ಬೆಲೆ ಹೆಚ್ಚಿದಾಗ ಮಾರಬೇಕಾಗುತ್ತದೆ. ಆದರೆ ರೈತರಿಗೆ ತಾವು ಪಡೆದ ಸಾಲದ ಮರುಪಾವತಿಗಾಗಲಿ ಅಥವಾ ತಮಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಲಿ ಆಗಲೇ ಫಸಲು ಮಾರದಿದ್ದರೆ ಸಾಕಷ್ಟು ಹಣವಿರುವುದಿಲ್ಲ. ಈ ತೊಂದರೆಯನ್ನು ನಿವಾರಿಸಲು ತಮ್ಮ ಫಸಲನ್ನು ಸಹಕಾರ ಮಾರಾಟ ಸಂಘಗಳಲ್ಲಿ ಒತ್ತೆಯಿಟ್ಟು ಸಾಲವನ್ನು ಪಡೆದು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು. ತಮ್ಮ ಪದಾರ್ಥಗಳಿಗೆ ಒಳ್ಳೆ ಬೆಲೆ ಬಂದಾಗ ಸದರಿ ಸಂಘಗಳ ಸಹಾಯದಿಂದ ಮಾರಿ ಬಂದ ಹಣದಲ್ಲಿ ಒತ್ತೆಯಿಟ್ಟುಪಡೆದ ಸಾಲವನ್ನು ಮರುಪಾವತಿಮಾಡಿ ಮಿಕ್ಕ ಹಣವನ್ನು ಪಡೆಯಬಹುದು.

ಈ ಸೌಲಭ್ಯದ ಜೊತೆಗೆ ತಾವು ಬೆಳೆದ ಫಸಲನ್ನು ಪರಿವರ್ತಿಸಿ ಮಾರಿದ ಪಕ್ಷದಲ್ಲಿ ಇನ್ನೂ ಹೆಚ್ಚಿನ ಬೆಲೆ ಪಡೆಯಬಹುದು. ಈ ದಿಶೆಯಲ್ಲಿ ರೈತರಿಗೆ ನೆರವಾಗಲು ಅನೇಕ ಮಾರಾಟ ಸಹಕಾರ ಸಂಘಗಳು ಭತ್ತದ ಗಿರಣಿ ಹತ್ತಿಗಿರಣಿಗಳು ಎಣ್ಣೆ ಬೀಜಗಳಿಂದ ಎಣ್ಣೆ ತೆಗೆಯುವ ಯಂತ್ರಗಳು ಮೊದಲಾದವುಗಳನ್ನು ಸ್ಥಾಪಿಸಿವೆ. ಅಲ್ಲದೆ ಕಬ್ಬು ಬೆಳೆಗಾರರಿಗೆ ದೊಡ್ಡ ದೊಡ್ಡ ಸಕ್ಕರೆ ಕಾರ್ಖಾನೆಗಳು ಮುಂತಾದುವನ್ನು ಸಹಕಾರ ರಂಗದಲ್ಲಿ ಸ್ಥಾಪಿಸಲಾಗಿದೆ. ಇವುಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಮಹಿಮ ಶ್ರೀ ಸಚ್ಚಿದಾನಂದ ಭಾರತೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಮಹಿಮ ಶ್ರೀ ಶಂಕರ ಭಗವತ್ಪಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವೊಂದು ಉದಾಹರಣೆಗೆ ಹೇಳುವುದಾದರೆ, ಮಂಡ್ಯ ರೈತರ ಸಹಕಾರ ಮಾರಾಟ ಸಂಘ, ಬಾಗಲಕೋಟೆ ಮತ್ತು ಬಿಜಾಪುರ ಹತ್ತಿ ಮತ್ತು ನೂಲಿನ ಗಿರಣಿ, ರಾಯಚೂರು ಮಾರಾಟ ಸಂಘದ ಆಶ್ರಯದಲ್ಲಿರುವ ಎಣ್ಣೆ ಪರಿಷ್ಕರಣ ಯಂತ್ರ, ಬೆಳಗಾವಿ ಜಿಲ್ಲೆಯಲ್ಲಿರುವ ಸಂಕೇಶ್ವರ, ಚಿಕ್ಕೋಡಿ ಸಕ್ಕರೆ ಕಾರ್ಖಾನೆ, ಮಂಡ್ಯದಲ್ಲಿರುವ ಪಾಂಡವಪುರ ಸಕ್ಕರೆ ಕಾರ್ಖಾನೆ ಮೊದಲಾದವು. ನಮ್ಮ ರಾಜ್ಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಎಂಟು ಸಕ್ಕರೆ ಕಾರ್ಖಾನೆಗಳು, ಎರಡು ಎಣ್ಣೆ ತೆಗೆಯುವ ಕಾರ್ಖಾನೆಗಳಿವೆ.

ನೀವು ಇದುವರೆಗೆ ತಿಳಿದುಕೊಂಡದ್ದು ಸಾಮಾನ್ಯವಾಗಿ ತಾಲ್ಲೂಕು ಮಟ್ಟದಲ್ಲಿರುವ ಮಾರಾಟ ಸಹಕಾರ ಸಂಘಗಳ ಉಪಯುಕ್ತತೆ. ಈ ಸಹ ಕಾರ ಸಂಘಗಳಲ್ಲದೆ, ಹತ್ತಿ ಮತ್ತು ಅಡಕೆ ಬೆಳೆಗಾರರ ಅನುಕೂಲಕ್ಕಾಗಿ ಪ್ರತ್ಯೇಕ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಹೆಚ್ಚು ಹತ್ತಿ ಬೆಳೆಯುವ ಗದಗ, ಬಾಗಲಕೋಟೆ, ಬಿಜಾಪುರ, ರಾಯಚೂರು ಮೊದಲಾದ ಕಡೆಗಳಲ್ಲಿ ಈ ತೆರನಾದ ಸಂಘಗಳನ್ನು ಕಾಣಬಹುದು. ಈ ಸಂಘಗಳು ರೈತರು ಬೆಳೆದ ಹತ್ತಿಯನ್ನು ಮಾರಾಟಮಾಡುವ ವ್ಯವಸ್ಥೆಯನ್ನು ಮಾಡಿವೆ. ಕೆಲವು ಸಂಘ ಗಳು ಹತ್ತಿಯನ್ನು ಬಿಡಿಸಿ, ಆರಳೆ ಮತ್ತು ಬೀಜವನ್ನು ಬೇರ್ಪಡಿಸಿ, ಬಿಡಿ ಸಿದ ಹತ್ತಿಯನ್ನು ಬೇಲುಗಳನ್ನಾಗಿ ಮಾಡಿ ಮಾರಲು ಅನುಕೂಲವಾಗು ವಂತೆ ಯಂತ್ರೋಪಕರಣಗಳನ್ನು ಸಹ ಹೊಂದಿರುತ್ತವೆ. ರೈತರು ಈ ಸೌಲಭ್ಯ ವನ್ನು ಉಪಯೋಗಿಸಿಕೊಂಡು ತಮ್ಮ ಹತ್ತಿಯನ್ನು ಬೇಲುಗಳ ರೂಪ ದಲ್ಲಿ ಮಾರುವುದರಿಂದ ಹೆಚ್ಚಿಗೆ ಬೆಲೆ ಬರುತ್ತದೆ. ಈ ರೀತಿಯ ಸೌಕರ್ಯ ವನ್ನು ನೀವು ಹೆಚ್ಚಾಗಿ ಗದಗ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆ ಗಳಲ್ಲಿ ಕಾಣಬಹುದು. ಇದರಂತೆಯೇ ಅಡಕೆ ಬೆಳೆಗಾರರಿಗೆ ಸೂಕ್ತ ಬೆಲೆ ದೊರಕಿಸಿಕೊಡಲು ಅಡಕೆ ಬೆಳೆಗಾರರ ಸಂಘಗಳು ಸಹಾಯ ಮಾಡುತ್ತಿವೆ. ಇದೇ ರೀತಿ ಸಕ್ಕರೆ ಕಾರ್ಖಾನೆಗಳೂ ಕಬ್ಬು ಬೆಳೆಯುವ ರೈತರಿಗೆ ಹೆಚ್ಚಿನ ಆದಾಯ ಬರುವ ಸಲುವಾಗಿ ಅವರು ಬೆಳೆದ ಕಬ್ಬನ್ನು ಕೊಂಡು, ಸಕ್ಕರೆ ಯನ್ನು ತಯಾರಿಸಿ, ಹೆಚ್ಚಿಗೆ ಬಂದ ಲಾಭಾಂಶವನ್ನು ಬೆಳೆಗಾರರಿಗೇ ಹಂಚು ತ್ತದೆ. 1975–76ನೆಯ ವರ್ಷದಲ್ಲಿ 17 ಕೋಟಿ ಟನ್ ಕಬ್ಬನ್ನು ಈ ಕಾರ್ಖಾನೆಗಳು ಅರೆದು ಸುಮಾರು ಒಂದು ಕೋಟಿ ಎಂಭತ್ತಾರು ಚೀಲ ಸಕ್ಕರೆಯನ್ನು ತಯಾರು ಮಾಡಿವೆ. ಈಗಾಗಲೆ ಇರುವ 8 ಸಹಕಾರಿ ಸಕ್ಕರೆ ಕಾರ್ಖಾನೆಗಳ ಜೊತೆಗೆ, ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಬೆಳಗಾವಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಸಹಕಾರಿ ಪರಿವರ್ತನೆಯಿಂದ ಅಧಿಕ ಬೆಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಿಲ್ಲೆಯ ರಾಯಬಾಗು ಮತ್ತು ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ಈ ಸ್ಥಳಗಳಲ್ಲಿ ಮತ್ತೆ ಮೂರು ಸಹಕಾರಿ ಸಕ್ಕರೆ ಕಾರ್ಖಾನೆಗಳು ಕೆಲಸ ಪ್ರಾರಂಭಮಾಡಲಿವೆ. ಇವಲ್ಲದೆ ಧಾರವಾಡ ಜಿಲ್ಲೆಯ ಹಾವೇರಿ, ಮಂಗಳೂರು ಜಿಲ್ಲೆಯ ಉಡುಪಿ, ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಹಾಸನ ಮೊದಲಾದ ಸ್ಥಳಗಳಲ್ಲಿ ಒಂದೊಂದು ಕಾರ್ಖಾನೆಯನ್ನು ಸ್ಥಾಪಿಸಲು ಭಾರತ ಸರ್ಕಾರದಿಂದ ಲೈಸೆನ್ಸ್ ಪಡೆಯಲಾಗಿದೆ.

ರೈತರು ಬೆಳೆದ ಫಸಲಿಗೆ ಯೋಗ್ಯ ಬೆಲೆಯನ್ನು ಒದಗಿಸಲು ಅನುವಾಗುವಂತೆ ಈ ಮಾರಾಟ ಸಂಘಗಳ ಸದಸ್ಯತ್ವವನ್ನು ಪಡೆದಿರುವ ಮತ್ತೊಂದು ದೊಡ್ಡ ಸಹಕಾರವೆಂದರೆ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಲ. ಇದು ಬೆಂಗಳೂರಿನಲ್ಲಿದೆ. ಈ ಸಹಕಾರ ಸಂಘವು ತನ್ನ ಇತರೆ ಮಾರಾಟ ಸಹಕಾರ ಸಂಘಗಳಿಗೆ ಬೇಕಾಗುವ ರಾಸಾಯನಿಕ ಗೊಬ್ಬರ ಕ್ರಿಮಿನಾಶಕಗಳನ್ನು ಹೊರಗಡೆಯಿಂದ ತರಿಸಿ ಹಂಚುತ್ತದೆ. ಈ ಸಂಘವು ವರ್ಷಕ್ಕೆ ಸುಮಾರು ಹತ್ತು ಹದಿನೈದು ಕೋಟಿ ರೂಪಾಯಿನಷ್ಟು ರಾಸಾಯನಿಕ ಗೊಬ್ಬರವನ್ನು ಮಾರಾಟಮಾಡುತ್ತಿದೆ. ಅಲ್ಲದೆ ಸರ್ಕಾರದ ಪರವಾಗಿ ರೈತರು ಬೆಳೆದ ಭತ್ತ ಜೋಳ ಮೊದಲಾದುವುಗಳನ್ನು ನೇರವಾಗಿ ಕೊಂಡು ಸರ್ಕಾರದ ಆದೇಶದ ಮೇಲೆ ಬೇರೆ ಬೇರೆ ಜಿಲ್ಲೆಗಳಿಗೆ ಅಲ್ಲಿ ವಾಸಿಸುವ ಬಳಕೆದಾರರ ಉಪಯೋಗಕ್ಕಾಗಿ ಕಳುಹಿಸುತ್ತದೆ. ರೈತರಿಗೆ ಉತ್ತಮ ಬೆಲೆಯನ್ನು ಒದಗಿಸುವ ಉದ್ದೇಶದಿಂದ ಅವರು ಬೆಳೆದ ಹತ್ತಿಯನ್ನು ಸಹ ಸುಗ್ಗಿ ಕಾಲದಲ್ಲಿ ಕೊಂಡು ಗಿರಣಿಗಳಿಗೆ ಒದಗಿಸುತ್ತದೆ. ಸುಮಾರು ಹದಿನೈದು ಕೋಟಿ ರೂಪಾಯಿಗಳ ಹತ್ತಿಯನ್ನು ರೈತರಿಂದ ಖರೀದಿ ಮಾಡಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಾಹಕರ ಸಹಕಾರ ಸಂಘಗಳು

ಇದುವರೆಗೆ ಸಹಕಾರ ಸಂಘಗಳಿಂದ ರೈತರಿಗೆ ಒದಗುತ್ತಿರುವ ಸೌಲಭ್ಯಗಳನ್ನು ತಿಳಿದಿರಲ್ಲವೆ? ಈ ಸೌಲಭ್ಯಗಳನ್ನೆಲ್ಲ ಗ್ರಾಮಾಂತರ ವಾಸಿಗಳು ಪಡೆಯಬಹುದಾದರೆ ಪಟ್ಟಣಗಳಲ್ಲಿ ವಾಸಿಸುವ ಜನಗಳಿಗೆ ಸೌಕರ್ಯ ಒದಗಿಸಲು ಸಹಕಾರ ಕ್ಷೇತ್ರದಲ್ಲಿರುವ ಯೋಜನೆಗಳ ಬಗ್ಗೆ ತಿಳಿಯೋಣ.

ನೀವು ವಾಸಿಸುತ್ತಿರುವ ಸ್ಥಳ ಪಟ್ಟಣದ ಬಡಾವಣೆಯಾಗಿದ್ದರೆ ಅಲ್ಲಿ ಒಂದಲ್ಲ ಒಂದು ಹೆಸರಿನ ಸಹಕಾರ ಸಂಘದ ಹೆಸರನ್ನು ನೀವು ಓದಿರಬಹುದು. ಕೆಲವು ಸಂಘಗಳಿಗೆ ಭೇಟಿ ಕೊಟ್ಟಿರಬಹುದು. ಬೆಂಗಳೂರು ಅಥವಾ ಇತರ ಜಿಲ್ಲೆಗಳಲ್ಲಿ ನೀವು ಜನತಾ ಬಜಾರುಗಳನ್ನು ನೋಡಿರಬಹುದು. ನಿತ್ಯಬಳಕೆ ವಸ್ತುಗಳನ್ನು ಮಾರುತ್ತಿರುವ ಸಹಕಾರ ಸಂಘಗಳನ್ನು ಸಾಮಾನ್ಯವಾಗಿ ಬಳಕೆದಾರರ ಸಹಕಾರ ಸಂಘ ಇಲ್ಲವೇ ಗ್ರಾಹಕರ ಸಹಕಾರ ಸಂಘ ಎಂದು ಕರೆಯುತ್ತಾರೆ. ಈ ಸಂಘಗಳಲ್ಲಿ ಸಾಮಾನ್ಯವಾಗಿ ಪಟ್ಟಣಗಳಲ್ಲಿ ಅಥವಾ ತಾಲ್ಲೂಕು ಕೇಂದ್ರದಲ್ಲಿ ವಾಸಿಸುತ್ತಿರುವ ಜನಗಳೇ ಸದಸ್ಯರಾಗಿರುತ್ತಾರೆ. ಈ ಸದಸ್ಯರು ಪ್ರತಿ ವರ್ಷಕ್ಕೆ ಒಂದಾವರ್ತಿ ಸಭೆ ನಡೆಸಿ ತಮಗೆ ಬೇಕಾದವರನ್ನು ಕಾರ್ಯನಿರ್ವಹಿಸುವ ಸಮಿತಿಗೆ ಚುನಾಯಿಸುತ್ತಾರೆ. ಈ ರೀತಿ ಚುನಾಯಿತರಾದವರು ಸದಸ್ಯರಿಗೆ ಬೇಕಾದ ನಿತ್ಯಬಳಕೆ ವಸ್ತುಗಳನ್ನು ಒಟ್ಟಾಗಿ ಕೊಂಡು ಸುಲಭ ಬೆಲೆಯಲ್ಲಿ ಒದಗಿಸಲು ನೆರವಾಗುವರು. ಈ ಸಂಘಗಳು ಉತ್ತಮವಾಗಿ ಕಾರ್ಯ ನಡೆಸಲು ಸರ್ಕಾರದಿಂದ ಷೇರು ಹಣದ ರೂಪದಲ್ಲಿ ಸಹಾಯದೊರಕುವುದರ ಜೊತೆಗೆ, ಸಂಘದ ವ್ಯಾಪಾರವನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ನೇಮಿಸಿಕೊಳ್ಳುವ ಸಿಬ್ಬಂದಿ ಅಥವಾ ನೌಕರರ ಸಂಬಳದ ಬಾಬಿನ ಸ್ವಲ್ಪಭಾಗವನ್ನು ಸಹಾಯಧನದ ರೂಪದಲ್ಲಿ ಕೊಡುತ್ತದೆ, ಇದರಿಂದ ಪ್ರಾರಂಭದ ಮೂರು ನಾಲ್ಕು ವರ್ಷಗಳಲ್ಲಿ ಸಂಘಕ್ಕೆ ನಷ್ಟವಾಗ

Sri Vidyabharathi Book Centre, Sringeri

CC-O. In Public Domain. Digitized by eGangotri



ಬಳಕೆದಾರರ ಆವಶ್ಯಕತೆಯ ಪೂರೈಕೆಯಲ್ಲಿ ಸಹಕಾರ ಸಂಘದ ಪಾತ್ರ (ಜನತಾ ಬಜಾರ್)

Sri Vidyabharathi Book Centre, Sringeri

CC-O. In Public Domain. Digitized by eGangotri

ದಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಪ್ರಾಥಮಿಕ ಬಳಕೆದಾರರ ಸಂಘಗಳಿಗೆ ಬೇಕಾಗುವ ಸಾಮಾನುಗಳನ್ನು ಪ್ರತಿ ಸಹಕಾರ ಸಂಘವೂ ಪೇಟೆಯಿಂದ ಕೊಂಡುತಂದರೆ ಬೆಲೆ ಹೆಚ್ಚಾಗಬಹುದು. ಅನೇಕ ಸಂಘಗಳಲ್ಲಿ ಈ ವ್ಯಾಪಾರವನ್ನು ಮಾಡಲು ಸಾಕಷ್ಟು ಹಣವಿಲ್ಲದೆ, ವರ್ತಕರಿಂದ ಸಾಲದ ಮೇಲೆ ಸಾಮಾನು ತರಬೇಕಾಗಬಹುದು. ಇಲ್ಲವೆ ತಮ್ಮಲ್ಲಿರುವ ಹಣದ ಮಿತಿಯಲ್ಲಿ ಮಾತ್ರ ಸಾಮಾನುಗಳನ್ನು ಕೊಳ್ಳಬೇಕಾಗಬಹುದು. ಸ್ವಲ್ಪ ಪ್ರಮಾಣದಲ್ಲಿ ಸಾಮಾನುಗಳನ್ನು ಕೊಂಡು ಮಾರುವುದರಿಂದ ಕೆಲವು ಅನುಕೂಲಗಳು ಮತ್ತು ಅನಾನುಕೂಲಗಳೂ ಉಂಟು. ಅನುಕೂಲಗಳಾವುವೆಂದರೆ ಅವಶ್ಯಕವಾಗಿ ಬೇಕಾಗುವ ಸಾಮಾನುಗಳನ್ನು ಕೊಳ್ಳುವುದರಿಂದ ಅಂತಹ ಸಾಮಾನುಗಳು ಬೇಗ ಮಾರಾಟವಾಗುವುವು. ಈ ರೀತಿ ಮಾರಾಟವಾದಲ್ಲಿ ಅಂತಹ ಮಾರಾಟದಿಂದ ಹೆಚ್ಚಿಗೆ ಆದಾಯ ಬರುವ ಜಾಸ್ತಿ ಸಾಮಾನುಗಳನ್ನು ಹೆಚ್ಚು ಕಾಲ ಇಡದಿರುವುದರಿಂದ ಸಾಮಾನುಗಳು ಕೆಡುವುದಾಗಲಿ ಪೋಲಾಗುವುದಾಗಲಿ ಅಷ್ಟಾಗಿ ಇರುವುದಿಲ್ಲ. ಅಲ್ಲದೆ, ತಮ್ಮಲ್ಲಿರುವ ಬಂಡವಾಳವಷ್ಟನ್ನೆ ಉಪಯೋಗಿಸುವುದರಿಂದ ಹೆಚ್ಚಿಗೆ ಬೇಕಾಗುವ ಹಣವನ್ನು ಸಾಲವಾಗಿ ಹೊರಗಡೆಯಿಂದ ಹೆಚ್ಚಿಗೆ ಬಡ್ಡಿತೆತ್ತು ಪಡೆಯಬೇಕಾಗಿಲ್ಲ.

ಅನಾನುಕೂಲಗಳು ಯಾವುವೆಂದರೆ, ಸ್ವಲ್ಪ ಪ್ರಮಾಣದಲ್ಲಿ ಪದಾರ್ಥಗಳನ್ನು ಕೊಂಡರೆ ಅವುಗಳನ್ನು ಸಾಗಿಸಲು ಗಾಡಿ ಬಾಡಿಗೆ ಕೂಲಿ ಮೊದಲಾದ ಖರ್ಚುಗಳು ಹೆಚ್ಚಾಗುತ್ತವೆ. ಅಲ್ಲದೆ ಸಾಮಾನುಗಳು ಮುಗಿದ ಕೂಡಲೆ ಪ್ರತಿ ಸಲಕ್ಕೂ ಪೇಟೆಗೆ ಹೋಗಿ ಸಾಮಾನು ತರಬೇಕಾಗುವುದರಿಂದ ಸಂಘದ ಬಾಗಿಲನ್ನು ಅನೇಕ ವೇಳೆ ಮುಚ್ಚಬೇಕಾಗಬಹುದು. ಈ ಓಡಾಟಕ್ಕಾಗಿಯೇ ಹೆಚ್ಚುಕಾಲ ಪೋಲಾಗುತ್ತವೆ. ಕೆಲವು ಸಂದರ್ಭಗಳಲ್ಲಿ ಬೇಕಾಗಿರುವ ಸಾಮಾನು ಸಿಕ್ಕದೆ ಹೋಗಬಹುದು. ಹೆಚ್ಚಿಗೆ ಬಂಡವಾಳವಿರುವ ವರ್ತಕರು ಹೆಚ್ಚು ಪ್ರಮಾಣದಲ್ಲಿ ಅವಶ್ಯಕ ವಸ್ತುಗಳ ಶೇಖರಣೆಮಾಡಿ ವ್ಯಾಪಾರ ಮಾಡುವುದರಿಂದ ಅವರಿಗೆ ಇತರ ಖರ್ಚುಗಳು ಕಡಿಮೆಯಾಗಿ ಸಂಘದಲ್ಲಿ ಮಾರುತ್ತಿರುವ ಬೆಲೆಗಳಿಗಿಂತ ಕಡಿಮೆ ಬೆಲೆಯಲ್ಲಿ ಮಾರಲು ಸಾಧ್ಯವಾಗಬಹುದು. ಇದರಿಂದಾಗಿ ಸಂಘದ ಮೇಲಿರುವ ವಿಶ್ವಾಸ ಜನಗಳಿಗೆ ಕಡಿಮೆಯಾಗಬಹುದು.

ಈ ಪರಿಸ್ಥಿತಿಯನ್ನು ಆರಿತು ಕರ್ನಾಟಕ ರಾಜ್ಯದಲ್ಲಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟಗಳಲ್ಲಿ ಒಂದೊಂದು ಸಗಟು ಗ್ರಾಹಕರ ಸಂಘವನ್ನು

Sri Vidyabharathi Book Centre, Sringeri

CC-0. In Public Domain. Digitized by eGangotri

ಸ್ಥಾಪಿಸಲಾಗಿದೆ. ಇವುಗಳಿಗೆ ಬೇಕಾಗುವ ಬಂಡವಾಳವನ್ನು ಷೇರು ಹಣದ ರೂಪದಲ್ಲಿ ಸರ್ಕಾರವು ಒದಗಿಸಿರುವುದರ ಜೊತೆಗೆ, ಜಿಲ್ಲಾಕೇಂದ್ರ ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳು ಮತ್ತು ಅಪೆಕ್ಸ್ ಬ್ಯಾಂಕು ಸಾಲದ ರೂಪದಲ್ಲಿ ಸಹಾಯ ಒದಗಿಸಿವೆ. ಸರ್ಕಾರವು ಷೇರು ಬಂಡವಾಳದ ರೂಪದಲ್ಲಿ 1974ರ ಅಖ್ಯೆರಿಗೆ 95 ಲಕ್ಷ ರೂಪಾಯಿಗಳನ್ನು, ಬ್ಯಾಂಕುಗಳು ಸಾಲದರೂಪದಲ್ಲಿ 50 ಲಕ್ಷ ರೂಪಾಯಿಗಳನ್ನು ಒದಗಿಸಿವೆ. ಈ ಗ್ರಾಹಕರ ಸಹಕಾರ ಸಂಘಗಳಿಂದ ಆಗಿರುವ ಒಟ್ಟು ವ್ಯಾಪಾರ ರೂ. 40 ಕೋಟಿಗೂ ಮೀರಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೃಹನಿರ್ಮಾಣ ಸಹಕಾರ ಸಂಘಗಳು

ಮನೆಕಟ್ಟಲು ಸಹಾಯ

ಇದೇ ರೀತಿಯಲ್ಲಿ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಮನೆ ಕಟ್ಟಲು ನಿವೇಶನಗಳನ್ನು ಕೊಡಲು ಮತ್ತು ಮನೆಗಳನ್ನು ಕಟ್ಟಲು ಸಹಾಯ ಮಾಡಲು ಪ್ರತ್ಯೇಕ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ ಹರಿಜನ ಮತ್ತು ಗಿರಿಜನರಿಗಾಗಿ ಸ್ಥಾಪಿಸಿರುವ ಪ್ರತ್ಯೇಕ ಸಂಸ್ಥೆ ಮತ್ತು ಇತರ ಜನರಿಗಾಗಿ ಸ್ಥಾಪಿಸಿರುವ ಸಂಸ್ಥೆ ಮುಖ್ಯವಾದವು. ಹರಿಜನ ಮತ್ತು ಗಿರಿ ಜನರ ಶೋಚನೀಯ ಪರಿಸ್ಥಿತಿಯನ್ನು ಸರ್ಕಾರದವರು ಮನಗಂಡು ಅವರ ವಾಸಕ್ಕಾಗಿ ಶೇ. 3ರ ಬಡ್ಡಿ ದರದಲ್ಲಿ ಈ ಸಂಸ್ಥೆಯು ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಸಾಲವಾಗಿ ಪಡೆದು 22,800 ಮನೆಗಳನ್ನು ಕಟ್ಟಲು ಸಹಾಯ ಮಾಡಿದೆ. ಈ ಪೈಕಿ 17,000 ಮನೆಗಳು ಪೂರ್ತಿಯಾಗಿ ಆ ಜನರು ನೆಮ್ಮದಿಯಿಂದ ವಾಸಿಸುತ್ತಿದ್ದಾರೆ. ಇತರ ಜನರಿಗೆ ನಿರ್ಮಿತವಾಗಿರುವ ಸಂಸ್ಥೆಯು ಸುಮಾರು ರೂ. 3.50 ಕೋಟಿ ಬಂಡವಾಳ ಹೊಂದಿದ್ದು 8,000 ಮನೆಗಳ ನಿರ್ಮಾಣಕ್ಕೆ ಸಹಾಯ ಮಾಡಿದೆ.

ಕೈಗಾರಿಕಾ ಸಹಕಾರ ಸಂಘ

ಕೈಗಾರಿಕೆಯಲ್ಲಿ ತೊಡಗಿರುವ ಜನರಿಗೆ ಸಹಾಯ ಮಾಡಲು ಸಹ ಅನೇಕ ಸಹಕಾರ ಸಂಘಗಳು ಕಾರ್ಯೋನ್ಮುಖವಾಗಿವೆ. ಇವುಗಳಲ್ಲಿ ಮುಖ್ಯ ವಾದುವುಗಳೆಂದರೆ, ನೂಲು, ರೇಷ್ಮೆ ಮತ್ತು ವುಲನ್ ಕೈಮಗ್ಗದ ಉದ್ಯಮ ದಲ್ಲಿ ತೊಡಗಿರುವವರಿಗೆ ಬೇಕಾಗುವ ನೂಲು, ನೇಯ್ಗೆ ಸಲಕರಣೆಗಳು ಮೊದಲಾದವುಗಳನ್ನು ಒದಗಿಸುವುದು ಮತ್ತು ಅವರು ತಯಾರಿಸಿದ ವಸ್ತು ಗಳನ್ನು ಕೊಂಡು ಬೇರೆಯವರಿಗೆ ಮಾರುವ ವ್ಯವಸ್ಥೆಯನ್ನು ಮಾಡುವುದು. ಇವುಗಳ ಕೆಲಸವು ಸುಗಮವಾಗಿ ನಡೆಯಲು ಅನುಕೂಲ ವಾಗುವಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ಕಾರವು ಈ ವೃತ್ತಿಯಲ್ಲಿ ತೊಡಗಿರುವವರಿಗೆ ಸಂಘದ ಸದಸ್ಯರಾಗಲು ಮೂಲ ಷೇರು ಬಂಡವಾಳವನ್ನು ಸಾಲದ ರೂಪದಲ್ಲಿ ಒದಗಿಸಿ ಈ ಸಂಘಗಳಿಗೆ ಬೇಕಾಗುವ ಬಂಡವಾಳವನ್ನು ಹೂಡುವ ಹಣಕಾಸಿನ ಸಂಸ್ಥೆಗಳಿಗೆ ಗ್ಯಾರಂಟಿಯನ್ನು ಕೊಡುತ್ತದೆ.

ಇದರಂತೆಯೇ, ಗ್ರಾಮಾಂತರ ಕೈಗಾರಿಕೆಗಳಲ್ಲಿ ತೊಡಗಿರುವ ಕುಂಬಾರರು ಕುಲುಮೆ ಕೆಲಸದವರು ಬಡಗಿಗಳು ಚಮ್ಮಾರರು ಚಾಪೆಹೆಣೆಯುವವರು ಮೊದಲಾದವರಿಗೆ ಹಣ ಸಹಾಯ ಒದಗಿಸಲು ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟಿವೆ.

ಇದೂ ಅಲ್ಲದೆ ಭೂರಹಿತ ಕಾರ್ಮಿಕರಿಗೆ ಉದ್ಯೋಗದ ಅವಕಾಶವನ್ನು ಒದಗಿಸಿ, ಜೀವನವನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಕಾರ್ಮಿಕರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ ಮತ್ತು ಸ್ಥಾಪಿಸಲಾಗುತ್ತಿದೆ. ಈ ಸಂಘಗಳ ಸದಸ್ಯರಾಗಿರುವ ಕಾರ್ಮಿಕರಿಗೆ, ರಸ್ತೆ ನಿರ್ಮಾಣ ಕಟ್ಟಡದ ಕೆಲಸಗಳು, ಬಾವಿ ಮತ್ತು ಮಾಧ್ಯಮಿಕ ನೀರಾವರಿ ಯೋಜನೆಗಳು, ಕೆರೆಗಳ ದುರಸ್ತು ಮುಂತಾದ ಕಾಮಗಾರಿಗಳಲ್ಲಿ ಕೆಲಸವನ್ನು ಒದಗಿಸುತ್ತವೆ. ಇವೂ ಅಲ್ಲದೆ, ಇಟ್ಟಿಗೆ ಕೊಯ್ಯುವುದು, ಜಲ್ಲಿಚೂರು ಮಾಡುವುದು, ಅರಣ್ಯಗಳ ಉತ್ಪನ್ನಗಳ ಶೇಖರಣೆ ಮತ್ತು ಮಾರಾಟ ಮೊದಲಾದ ಕೆಲಸಗಳನ್ನು ವಹಿಸುತ್ತವೆ.

ಇದೇ ರೀತಿಯಲ್ಲಿ ಬಡಜನರ ಏಳಿಗೆಗಾಗಿ ರಿಕ್ಷಾವಾಲಾ ಸಂಘಗಳು ಬೆಸ್ತರ ಸಂಘಗಳು ಕೋಳಿ ಸಾಕಣೆ ಸಂಘಗಳು ಕ್ಷೀರ ಮತ್ತು ಕ್ಷೀರೊತ್ಪನ್ನ ಸಂಘಗಳು ವಿದ್ಯಾವಂತ ನಿರುದ್ಯೋಗಿಗಳ ಸಂಘಗಳು ಮೊದಲಾದುವುಗಳನ್ನು ಸ್ಥಾಪಿಸಲಾಗಿದೆ. ವಿದ್ಯಾಸಂಸ್ಥೆಗಳು ಆಸ್ಪತ್ರೆಗಳು ಸಹ ಸಹಕಾರ ಕಾನೂನಿನ ಪ್ರಕಾರ ಸ್ಥಾಪಿಸಲಾಗಿದೆ.

ನಮ್ಮ ರಾಷ್ಟ್ರವು ಸ್ವಾತಂತ್ರ್ಯ ಹೊಂದಿದನಂತರ ಸಹಕಾರ ಸಂಘಗಳು ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡುವಂತಾಗಿದೆ. ಆದರೂ ಬಡತನ ದೊಡ್ಡ ಸಮಸ್ಯೆಯಾಗಿ ಇನ್ನೂ ಉಳಿದಿದೆ. ಬಡತನವನ್ನು ತೊಲಗಿಸುವ ಪ್ರಯತ್ನವನ್ನು ಈಚಿನ ವರ್ಷಗಳಲ್ಲಿ ತೀವ್ರಗೊಳಿಸಲಾಗಿದೆ. ಬಹುಸಂಖ್ಯಾತ ದುರ್ಬಲ ವರ್ಗದವರ ನಿರಕ್ಷರತೆ, ಅಜ್ಞಾನ, ಶೋಷಣೆ, ಕಡಿಮೆ ವರಮಾನ. ಸಮಾಜದಲ್ಲಿ ಕೀಳು ಅಂತಸ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲಾದ ದೋಷಗಳನ್ನೆಲ್ಲ ನಿವಾರಿಸಿ ಅವರನ್ನು ಬಲಿಷ್ಠರಾದ ಉತ್ತಮ ವ್ಯಕ್ತಿಗಳನ್ನಾಗಿ ಪ್ರಜೆಗಳನ್ನಾಗಿ ಪರಿವರ್ತಿಸುವುದರಲ್ಲಿ ಸಹಕಾರ ವ್ಯವಸ್ಥೆಯದು ಅತಿ ಮುಖ್ಯ ಪಾತ್ರ. ಸಹಕಾರವು ಸಮಾಜದ ದುರ್ಬಲ ವರ್ಗಕ್ಕೆ ವರಪ್ರಸಾದವಾಗಿದೆ.

ಮುನ್ನೋಟ

ಸಹಕಾರ ಸಂಘಗಳು ಆರ್ಥಿಕವಾಗಿ ಹಿಂದುಳಿದವರ ಕಡಿಮೆ ಆದಾಯದವರ ಮತ್ತು ಮಧ್ಯಮ ವರ್ಗದವರ ಉನ್ನತಿಗಾಗಿ ಶ್ರಮಿಸುವ ಸಂಸ್ಥೆಗಳು. ಹೀಗಿರುವಾಗ ಅತಿ ಮುಖ್ಯವಾಗಿ ಗ್ರಾಮೀಣ ಜನರ ಕಲ್ಯಾಣ ಸಾಧನೆಯಲ್ಲಿ ಸಹಕಾರದ ಪಾತ್ರವೇನು ಎಂಬುದನ್ನು ತಿಳಿಯುವುದು ಅವಶ್ಯಕವಾಗಿರುತ್ತದೆ.

ವ್ಯವಸಾಯದಲ್ಲಿ ಉತ್ಪತ್ತಿ ಹೆಚ್ಚಿಸುವುದು. ಬಂದ ಉತ್ಪಾದನೆಗೆ ಸರಿಯಾದ ಬೆಲೆ ಒದಗಿಸುವುದು; ಗ್ರಾಮ ನಿವಾಸಿಗಳ ಅಗತ್ಯ ವಸ್ತುಗಳ ಪೂರೈಕೆ; ಅವರಿಗೆ ಸಹಕಾರದ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವುದು ಮೊದಲಾದುವು ಗ್ರಾಮೀಣ ಜನರ ಕಲ್ಯಾಣ ಸಾಧನೆಯಲ್ಲಿ ಮುಖ್ಯವಾದ ಅಂಶಗಳು. ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ, ರೈತರಿಗೆ ಅವಶ್ಯಕವಾಗಿ ಬೇಕಾದ ಉತ್ಪಾದನಾ ಸಾಧನಗಳು ದೊರೆಯಬೇಕು. ಬಾವಿ ತೋಡಲು ಇಲ್ಲವೇ ಇರುವ ಬಾವಿಗಳನ್ನು ಮತ್ತಷ್ಟು ಆಳಪಡಿಸಲು, ಪಂಪ್ ಸೆಟ್ (ನೀರೆತ್ತುವ ಯಂತ್ರ) ಜೋಡಿಸಲು ಸಹಾಯ ಒದಗಬೇಕು. ಜಮೀನು ಉಳಿಮೆಮಾಡಲು ಬೇಕಾದ ನೇಗಿಲು ಟ್ರ್ಯಾಕ್ಟರ್ ಪವರ್ ಟಿಲ್ಲರ್‌ಗಳು ಮತ್ತು ಇತರೆ ಸಲಕರಣೆಗಳು ದೊರಕಬೇಕು. ಉತ್ತಮ ಬೀಜ ರಾಸಾಯನಿಕ ಗೊಬ್ಬರ ಕ್ರಿಮಿನಾಶಕ ಔಷಧಿ ಮೊದಲಾದುವುಗಳಿಗೆ ಬೇಕಾದ ಸಾಲದ ನೆರವು ಸಿಗಬೇಕು. ಬೆಳೆದುಬಂದ ಧಾನ್ಯಗಳನ್ನು ಶೇಖರಿಸಿಡಲು ಉಗ್ರಾಣದ ವ್ಯವಸ್ಥೆಯಾಗಬೇಕು. ಬೆಳೆದ ಮಾಲಿಗೆ ಸರಿಯಾದ ಬೆಲೆ ದೊರಕಲು ಉತ್ತಮ ಮಾರುಕಟ್ಟೆ ಸಿಗಬೇಕು. ಇವೇ ಮುಂತಾದ ಸಕಾಲಿಕ ನೆರವುಗಳನ್ನು ಒದಗಿಸುವುದಲ್ಲದೆ ಅವರಿಗೆ ಬೇಕಾದ ತಾಂತ್ರಿಕ ಸಲಹೆಯನ್ನು ಇತರ ಇಲಾಖೆಗಳ ಪರಿಣತರ ಮುಖಾಂತರ ದೊರಕಿಸುವಲ್ಲಿ ಸಹಕಾರ ಸಂಘಗಳ ಪಾತ್ರ ಬಲು ಹಿರಿದು.

ವ್ಯವಸಾಯದ ಅಭಿವೃದ್ಧಿಯ ಜೊತೆಗೆ ರೈತರು ಹೈನುಗಾರಿಕೆ, ಕೋಳಿ ಸಾಕಣೆ, ಕುರಿ ಸಾಕಣೆ, ಹಂದಿ ಸಾಕಣೆ ಮೊದಲಾದ ಉಪಕಸುಬುಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈಕೊಂಡು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಹಕಾರ ಸಂಘ ದಿಂದ ಸಾಲದ ನೆರವನ್ನು ಪಡೆಯಬಹುದು. ಈ ರೀತಿಯಾಗಿ ಪಡೆಯುವ ಸಾಲಗಳು ಇತರ ಸಾಹುಕಾರರು ವಿಧಿಸುತ್ತಿದ್ದ ಬಡ್ಡಿಗಿಂತ ಅತಿ ಕಡಿಮೆ ಬಡ್ಡಿದರದಲ್ಲಿ ಸಿಗುವುವು. ಸಾಲಗಳನ್ನು ಮೂರು ವರ್ಷಗಳಿಂದ ಐದು ವರ್ಷಗಳವರೆಗೆ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬಹುದು.

ಋಣ ವಿಮೋಚನೆ

ಈಗಾಗಲೇ ತಿಳಿಸಿದಂತೆ ಭಾರತ ದೇಶದಲ್ಲಿ ರೈತರು ಸಾಹುಕಾರರ ಶೋಷಣೆಯಿಂದ ಬಹಳ ಕಷ್ಟಪಡುತ್ತಿದ್ದರು. ಈಗ ರೂ. 2,400 ಕ್ಕಿಂತ ಕಡಿಮೆ ವಾರ್ಷಿಕ ಆದಾಯವುಳ್ಳ ಸಾಲಗಾರರನ್ನು ಸರ್ಕಾರದ ಕಾನೂನು ಮೂಲಕ ಋಣ ಮುಕ್ತರನ್ನಾಗಿ ಮಾಡಿದೆ. ಅವರು ಇನ್ನು ಮುಂದೆ ಸಾಹುಕಾರರಿಗೆ ಸಾಲಕೊಡಬೇಕಾಗಿಲ್ಲ. ಅಲ್ಲದೆ ಅವರು ಸಾಲ ಪಡೆಯಲು ಅಡವಿಟ್ಟಿದ್ದ ಪದಾರ್ಥಗಳನ್ನು ವಾಪಸು ಪಡೆಯಲು ನೆರವಾಯಿತು. ಸಾಹುಕಾರರು ಇಂತಹ ಸಾಲಗಾರರ ಮೇಲೆ ತಮಗೆ ಬರಬೇಕಾಗಿದ್ದ ಹಣಕ್ಕೆ ಯಾವ ಕೋರ್ಟಿನ ಮುಂದೆಯೂ ಕೇಸು ಹಾಕಲು ಬರುವುದಿಲ್ಲ. ಹಾಗೆ ಹಾಕಿದರೂ ಅಂತಹ ಕೇಸುಗಳನ್ನು ಕೋರ್ಟುಗಳು ತಳ್ಳಿಹಾಕುತ್ತವೆ.

ಈ ತೆರನಾದ ಕಾನೂನಿನಿಂದ ರೈತರನ್ನು ಸಾಹುಕಾರರ ಶೋಷಣೆಯಿಂದ ತಪ್ಪಿಸಲು ಸಾಧ್ಯವಾಯಿತು. ಆದರೆ ಅವರಿಗೆ ಅನಿರೀಕ್ಷಿತ ಖರ್ಚಿಗೆ ಇನ್ನು ಮುಂದೆ ಸಾಹುಕಾರರಿಂದ ಯಾವ ಸಾಲದ ನೆರವೂ ಸಿಕ್ಕುವುದಿಲ್ಲ. ಸಹಕಾರ ಸಂಘಗಳು ಇಂತಹ ಪರಿಸ್ಥಿತಿಯಲ್ಲಿ ಸಹಾಯಮಾಡಲು ಸರ್ಕಾರ ಆದೇಶ ನೀಡಿದೆ. ಇದರಂತೆ ಸಂಘದ ಸದಸ್ಯನಿಗೆ 250 ರೂ. ಗೆ ಮೀರದಂತೆ ಬಳಕೆ ಸಾಲ ದೊರೆಯುವಂತಾಗಿದೆ.

ಇದರ ಜೊತೆಗೆ ಈಗಾಗಲೇ ತಿಳಿಸಿದಂತೆ ಸಂಘದ ಸದಸ್ಯರಿಗೆ ವ್ಯವ ಸಾಯದ ಅಭಿವೃದ್ಧಿಗೆ ಉತ್ಪಾದನೆ ಮತ್ತು ಉಪಕಸುಬುಗಳನ್ನು ಕೈಗೊಳ್ಳಲು ಸಾಲದ ನೆರವು ಒದಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಕಾರ ಸಂಘಗಳ ಇತ್ತೀಚಿನ ಕಾನೂನು ತಿದ್ದುಪಡಿ

1. ಸಹಕಾರ ಸಂಘಗಳಲ್ಲಿ ಸದಸ್ಯರಾಗಬೇಕಾಗಿದ್ದರೆ ಅಂತಹವರು ಸಂಘದ ಬೈಲಾ ಪ್ರಕಾರ ಸಂಘಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗಿತ್ತು. ಅನಂತರ ಸಂಘದ ಆಡಳಿತ ಮಂಡಲಿಯವರು ಅಂತಹ ಅರ್ಜಿಗಳನ್ನು ಪರಿಶೀಲಿಸಿ ಸದಸ್ಯತ್ವವನ್ನು ಮಂಜೂರು ಮಾಡುತ್ತಿದ್ದರು. ಇಲ್ಲವೇ ವಜಾಮಾಡುತ್ತಿದ್ದರು. ಈ ಅಧಿಕಾರವನ್ನು ಆಡಳಿತ ಮಂಡಳಿಯವರು ಅದರಲ್ಲೂ ಗ್ರಾಮಾಂತರ ಸಂಘವನ್ನು ನಿರ್ವಹಿಸುತ್ತಿದ್ದ ಮಂಡಳಿಯವರು ತಮ್ಮ ಅಧಿಕಾರದ ದಾಹ ಮತ್ತು ದರ್ಪದಿಂದ ಅನೇಕ ಸಂದರ್ಭದಲ್ಲಿ ದುರುಪಯೋಗ ಪಡಿಸುತ್ತಿದ್ದುದರಿಂದ ಅನೇಕ ದಲಿತ ವರ್ಗದವರಿಗೆ ಸಹಕಾರ ಸಂಘದ ಸದಸ್ಯತ್ವ ದೊರಕದೆ ಅವರಿಗೆ ಬೇಕಾದ ಹಣದ ನೆರವನ್ನು ಸಾಹುಕಾರರಿಂದಲೇ ಪಡೆಯಬೇಕಾಗಿತ್ತು. ಸಹಕಾರ ಸಂಘಗಳ ಕಾನೂನು ಈ ಸಂದರ್ಭಗಳಲ್ಲಿ ಅವರಿಗೆ ಸಹಾಯವಾಗಿರಲಿಲ್ಲ. ಇದನ್ನು ಅರಿತು ಸರ್ಕಾರವು ಸಹಕಾರಿ ಕಾನೂನು ಸೆಕ್ಷನ್ 16ನ್ನು ತಿದ್ದುಪಡಿಮಾಡಿದೆ.

ಇದರ ಪ್ರಕಾರ ಒಬ್ಬ ವ್ಯಕ್ತಿಯು ಸದಸ್ಯತ್ವವನ್ನು ಕೋರಿ ಅರ್ಜಿಯನ್ನು ಹಾಕಿದ ದಿನವೇ ಅವನು ಆ ಸಂಘದ ಸಹ ಸದಸ್ಯ (Associate Member) ನಾಗುತ್ತಾನೆ. 15 ದಿನಗಳು ಮುಗಿಯುವ ಮುನ್ನ ಸಂಘವು ಸದರಿ ಅರ್ಜಿಯ ಬಗ್ಗೆ ಯಾವ ನಿರ್ಣಯವನ್ನು ತೆಗೆದುಕೊಳ್ಳದಿದ್ದರೆ ಆ ವ್ಯಕ್ತಿಯು ಸಂಘದ ಸದಸ್ಯನಾದಂತೆ ಎಂದು ಪರಿಗಣಿಸಲಾಗುವುದು.

2. ಪ್ರಾತಿನಿಧ್ಯದ ಆಧಾರದ ಮೇಲೆ ಕೆಲವು ಸಹಕಾರ ಸಂಘಗಳ ಸರ್ವಸದಸ್ಯರ ಸಭೆಯನ್ನು ನಡೆಸಲು ಸಹಕಾರಿ ಕಾನೂನು ತಿದ್ದುಪಡಿಮಾಡಲಾಗಿದೆ. ಇದಕ್ಕೆ ಮುಂಚೆ ಸಂಘದ ಸದಸ್ಯರು ಖಿದ್ದಾಗಿ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬೇಕಾಗಿತ್ತು. ಸದಸ್ಯರ ಪ್ರತಿನಿಧಿಗಳ ಸಂಖ್ಯೆಯನ್ನು ಸಂಘದ ಸರ್ವಸದಸ್ಯರ ಸಭೆಯೆಂದು ಕರೆಯಲು ಕಾನೂನಿನಲ್ಲಿ ಅವಕಾಶವಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

3. ಸಂಘದ ಆಡಳಿತ ಮಂಡಳಿಯಲ್ಲಿ ಕೋರಂ ಆಗಲು ಬೇಕಾಗುವಷ್ಟು ಇಲ್ಲದೆ ಆಡಳಿತ ಮಂಡಳಿಯ ಒಟ್ಟು ೨/೩ ಭಾಗ ಸದಸ್ಯರು ಚುನಾಯಿಸಲ್ಪಟ್ಟಿದ್ದರೆ ಅಂತಹ ಆಡಳಿತ ಮಂಡಳಿಯು ಸರ್ವಸದಸ್ಯರಿಂದ ಚುನಾಯಿತವಾದ ಮಂಡಳಿಯೆಂದು ಪರಿಗಣಿಸಬಹುದು. ಇದಕ್ಕೆ ಮುಂದೆ ಇದ್ದ ಕಾನೂನಿನಲ್ಲಿ ಈ ರೀತಿ ನಿರ್ಧರಿಸಲು ಅವಕಾಶವಿರಲಿಲ್ಲ.

ಇದರೊಂದಿಗೆ ಚುನಾಯಿತರಾದ ಸದಸ್ಯರಲ್ಲಿ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಮೊದಲಾದ ಅಧಿಕಾರಿಗಳನ್ನು ಚುನಾಯಿಸಲು ಸಂಘದ ಕಾರ್ಯದರ್ಶಿಯು ಸರ್ವಸದಸ್ಯರಿಂದ ಚುನಾವಣೆಯಾದ 15 ದಿನಗಳ ಒಳಗಾಗಿ ಚುನಾಯಿತರಾದ ಕಮಿಟಿ ಸದಸ್ಯರ ಸಭೆಯನ್ನು ಕರೆಯಬೇಕು. ಈ ರೀತಿ ಮೀಟಿಂಗನ್ನು ಕರೆಯಲು ತಪ್ಪಿದಲ್ಲಿ ರಿಜಿಸ್ಟ್ರಾರರು ಅಥವಾ ಅವರಿಂದ ಅಧಿಕಾರ ಪಡೆದವರು ಅಂತಹ ಮೀಟಿಂಗನ್ನು ತಿದ್ದುಪಡಿಯಾದ ಕಾನೂನು ಪ್ರಕಾರ ಕರೆಯಲು ಅವಕಾಶವಿರುತ್ತದೆ. ಈ ತಿದ್ದುಪಡಿಗಿಂತ ಮುಂಚೆ ಅನೇಕ ಸಂಘಗಳಲ್ಲಿ ಆಡಳಿತ ಸಮಿತಿಗೆ ಹೊಸದಾಗಿ ಚುನಾವಣೆ ನಡೆದಿದ್ದರೂ ಚುನಾಯಿತರಾದ ಸದಸ್ಯರ ಸಭೆಯನ್ನು ಬಹಳ ಕಾಲ ಕರೆಯದೇ ಇರುತ್ತಿದ್ದರು.

4. ತಿದ್ದುಪಡಿಯಾದ ಕಾನೂನಿನ ಪ್ರಕಾರ ಪ್ರತಿ ಸಂಘದಲ್ಲಿಯೂ ಒಬ್ಬ ಕಾರ್ಯದರ್ಶಿ ಇರಲೇಬೇಕು ಮತ್ತು ಅವರು ಸಂಘದ ಕಾಗದ ಪತ್ರಗಳು ಲೆಕ್ಕಗಳು ಮತ್ತು ಇತರ ಆಸ್ತಿಗಳಿಗೆ ಜವಾಬ್ದಾರರು. ಇದಕ್ಕೆ ಮೊದಲು ಚುನಾಯಿತ ಸದಸ್ಯರು ಹಿಂದಿನ ಆಡಳಿತ ಮಂಡಳಿಯವರಿಂದ ಸಂಘದ ಆಡಳಿತವನ್ನು ವಹಿಸಿಕೊಳ್ಳಬೇಕಾಗಿತ್ತು. ಇದರಿಂದಾಗಿ ಅನೇಕ ಸಂದರ್ಭಗಳಲ್ಲಿ ಹಿಂದಿನ ಆಡಳಿತ ಸಮಿತಿಯವರು ತಮ್ಮ ಸ್ಥಾನಗಳ ವ್ಯಾಮೋಹದಿಂದ, ಚುನಾಯಿತ ಸದಸ್ಯರಿಗೆ ಆಡಳಿತ ವಹಿಸಿಕೊಡದೆ ಸಹಕಾರ ಸಂಘಗಳು ಸುಗಮವಾಗಿ ಕೆಲಸ ನಡೆಸಲು ಅಡಚಣೆಯನ್ನು ತರುತ್ತಿದ್ದರು. ಈ ನ್ಯೂನತೆಯನ್ನು ತಿದ್ದುಪಡಿ ಮುಖಾಂತರ ನಿವಾರಣೆ ಮಾಡಿದ್ದರಿಂದ ಒಂದು ಆಡಳಿತ ಸಮಿತಿಯವರು ಮತ್ತೊಬ್ಬರಿಗೆ ಆಡಳಿತ ವಹಿಸಿಕೊಡುವ ಸಂದರ್ಭ ಇನ್ನಿರುವುದಿಲ್ಲ.

5. ಸಹಕಾರ ಸಂಘಗಳಲ್ಲಿ ಕೆಲವೊಂದು ಅಧಿಕಾರದಲ್ಲಿದ್ದವರು ಅನೇಕ ವರ್ಷಗಳ ಕಾಲ ಅದೇ ಅಧಿಕಾರದಲ್ಲಿ ಮುಂದುವರೆಯಬೇಕೆಂಬ ದುರಾಶೆಯಿಂದ ಬೇರೊಬ್ಬರಿಗೆ ಅವಕಾಶವನ್ನು ಕೊಡುತ್ತಿರಲಿಲ್ಲ. ಈ ಪಟ್ಟಭದ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿತಾಸಕ್ತಿಯನ್ನು ಬದಲಾಯಿಸಲು ಈಗ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಗಳನ್ನು ತರಲಾಗಿದೆ. ಇದರಂತೆ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯ ಅಧಿಕಾರಿಗಳಾಗಿ ಆರು ವರ್ಷಗಳಿಗಿಂತ ಹೆಚ್ಚಿಗೆ ಮುಂದುವರಿಯುವಂತಿಲ್ಲ. ಅವರು ಪುನಃ ಅಧಿಕಾರಿಗಳಾಗಿ ಚುನಾಯಿತರಾಗಬೇಕಾದರೆ ಆರು ವರ್ಷಗಳ ಅನಂತರವೇ ಸಾಧ್ಯ.

ಈ ಮೇಲ್ಕಂಡ ತಿದ್ದುಪಡಿಗಳ ಜೊತೆಗೆ, ಒಬ್ಬ ಸದಸ್ಯನು ತಾನು ಯಾವುದೇ ಸಂಘದಿಂದ ಪಡೆದ ಸಾಲವನ್ನು ಮರುಪಾವತಿ ಮಾಡದೆ ಸುಸ್ತಿಯಾದರೆ ಅವನು ಸಂಘದ ಆಡಳಿತ ಮಂಡಳಿ ಸದಸ್ಯನಾಗಲು ಅರ್ಹತೆಯನ್ನು ಕಳೆದುಕೊಳ್ಳುವುದರ ಜೊತೆಗೆ ಸಂಘದ ಸರ್ವ ಸದಸ್ಯತ್ವ, ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ಮತದಾನ ಮಾಡುವ ಹಕ್ಕನ್ನು ಕಳೆದುಕೊಳ್ಳುವನು. ಅಲ್ಲದೆ ಆಡಳಿತ ಮಂಡಳಿ ಸದಸ್ಯರಲ್ಲಿ ಯಾರಾದರೂ ಯಾವುದಾದರೂ ಸಂಘಕ್ಕೆ ಸುಸ್ತಿದಾರರಾದರೂ ಅವರು ತಮ್ಮ ಆಡಳಿತ ಮಂಡಳಿ ಸ್ಥಾನವನ್ನು ಕಳೆದುಕೊಳ್ಳುವರು.

ಅಲ್ಲದೆ ಸಹಕಾರಿ ಬ್ಯಾಂಕುಗಳಲ್ಲಿಟ್ಟಿರುವ ಠೇವಣಿದಾರರ ಠೇವಣಿ ಮೊಬಲಗಿನ ಸುರಕ್ಷತೆಗಾಗಿ ಬ್ಯಾಂಕಿಂಗ್ ಕಾಯಿದೆಯನ್ನು ಈ ಸಂಘಗಳಿಗೆ ಅನ್ವಯಿಸಿರುವುದೇ ಅಲ್ಲದೆ ಇಂಥ ಠೇವಣಿದಾರರ ಠೇವಣಿ ಮೊಬಲಗು ರೂ. 10,000 ವರೆವಿಗೂ ರಕ್ಷಿಸಲು ಡಿಪಾಜಿಟ್ ಇನ್‌ಷೂರೆನ್ಸ್ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡಿಸಲು ಸಹಕಾರ ಸಂಘಗಳ ಕಾಯಿದೆಯನ್ನು ತಿದ್ದುಪಡಿ ಮಾಡಲಾಗಿದೆ.

ಈ ಎಲ್ಲ ಕಾರ್ಯಕ್ರಮಗಳಿಂದ ಜನಸಾಮಾನ್ಯರ ಜೀವನದಲ್ಲಿ, ಅದರಲ್ಲೂ ದಲಿತ ವರ್ಗದವರ ಆರ್ಥಿಕ ಉನ್ನತಿಯ ಬಗ್ಗೆ ಸಹಕಾರ ಸಂಘಗಳು ಸಕ್ರಿಯ ಪಾತ್ರವಹಿಸಲು ಬೇಕಾದ ವಾತಾವರಣವನ್ನು ಕಲ್ಪಿಸಲಾಗಿದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ನಮ್ಮ ಪ್ರಕಟನೆಗಳಲ್ಲಿ
ಇತಿಹಾಸ ಸಂಸ್ಕೃತಿಗಳಷ್ಟೇ ಅಲ್ಲ
ವಿಜ್ಞಾನವೂ ಕೂಡ

ವಿಜ್ಞಾನ: ನೋಡು, ಕಲಿ

ಮಾಲೆಯಲ್ಲಿ ಹೆಸರೇ ಸೂಚಿಸುವಂತೆ
ವರ್ಣರಂಜಿತ ಚಿತ್ರಗಳನ್ನು ನೋಡಿ
ಸರಳ ನಿರೂಪಣೆಯಿಂದ ಕಲಿಯುವುದು.

ಈ ಮಾಲೆಯ ಪ್ರಕಟನೆಗಳು:

ಆಕಾಶದ ಅದ್ಭುತಗಳು	ಕಾಲಮಾಪನೆ
ಮನುಷ್ಯನ ಕತೆ	ನಮ್ಮ ದೇಹ
ಹಕ್ಕಿಗಳು	ಪ್ರಕೃತಿಯಲ್ಲಿ ನೀರು
ಸಂಚಾರ ಸಾಧನಗಳು	ಗಿಡಮರಗಳು
ಶಿಲೆಗಳು ಖನಿಜಗಳು	ಸಾಕು ಪ್ರಾಣಿಗಳು
ನಮ್ಮ ಭೂಮಿ	ಆರೋಗ್ಯ ನೈರ್ಮಲ್ಯ
ಹೂವುಗಳು	ಗತಕಾಲದ ಪ್ರಾಣಿಗಳು
ಕೀಟಗಳು	ಜೀವ ವಿಕಾಸ

ಬೆಲೆ ರೂ. 5

ಅಧಿಕೃತ ಮಾರಾಟಗಾರರು
ಇಂಡಿಯ ಬುಕ್ ಹೌಸ್ ಗಾಂಧಿನಗರ ಬೆಂಗಳೂರು–560 009

ಐ ಬಿ ಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು–560 009

Sri Vidyabharathi Book Centre, Sringeri

CC-0. In Public Domain. Digitized by eGangotri

ನಮ್ಮ ನಾಡು ಮತ್ತು ನಮ್ಮವರು
ಬಿ.ವಿ.ಎಚ್ ಪ್ರಕಾಶನ
ಬೆಂಗಳೂರು

ಇಂಡಿಯ ಬುಕ್ ಹೌಸ್



Sri Vidyabharati Book Centre, Sringeri

342